ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಬಂದು ಸೂಕ್ಷ್ಮವಾದ ಪ್ರಶ್ನೆ ಕೇಳಿದ್ದಾರೆ. ಸೊಸೈಟಿ ಸೆಕ್ಟಾರ್‌ನಲ್ಲಿ ತಪ್ಪು ಮಾಡಿದ್ದಾರೆ, ಈಗ ಅದನ್ನು ವಿತ್‌ಡ್ರಾ ಮಾಡಿದ್ದಾರೆ ರೈತರು ಹಣ ಕೊಡಲಿಕ್ಕೆ ಸಿದ್ಧರಿದ್ದರೂ ಅದನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಇರಲಿಲ್ಲ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ರೈತರು ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅವರಿಗೆ ಯಾವ ತೊಂದರೆಯೂ ಆಗದಂತೆ ವ್ಯವಸ್ಥೆ ಮಾಡುತ್ತೇವೆ. ಯಾವ ರೀತಿ ಇದಕ್ಕೆ ವ್ಯವಸ್ಥೆ ಮಾಡಬೇಕೆಂಬ ಬಗ್ಗೆ ಸಭೆಯ ಒಳಗೆ ಹೇಳುವುದಿಲ್ಲ, ಹೊರಗೆ ಹೇಳುತ್ತೇನೆ. ಅವರು ಹಣ ಕಟ್ಟಲಿಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇನೆ. ಅವರಿಗೆ ಕಾನೂನು ಪ್ರಕಾರ ಏನು ರಿಯಾಯಿತಿ ಸಿಗುತ್ತದೋ ಅದನ್ನು ಯಾವ ಅವಧಿಯಲ್ಲಿ ಕೊಡಬೇಕೋ ಆಗ ಕೊಟ್ಟು ಇದನ್ನು ಸರಿಪಡಿಸೋಣ ಇಲ್ಲಿ ಈ ಬಗ್ಗೆ ಚರ್ಚೆ ಬೇಡ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧಿಕಾರಿಗಳಿಗೆ ಸೂಚನೆ ಕೊಟ್ಟರೆ ಸಾಕು.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ...

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ.

ಡಾ॥ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಿಮ್ಮ ಪ್ರಿವಿಲೇಜ್ ಮೋಷನ್ ನೋಟೀಸ್ ಬಂದಿದೆ. ಮೊದಲು ಮುಖ್ಯ ಮಂತ್ರಿಗಳ ಉತ್ತರ ಮುಗಿಯಲಿ.

ಡಾ॥ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ಪ್ರಾತಿನಾಡಿದ ಮೇಲೆ ಅವರು ವಾಕೌಟ್ ಮಾಡುತ್ತಾರೆ. ಅವರ ರಿಪ್ಲೈ ಆದ ಮೇಲೆ ಅವರು ವಾಕೌಟ್ ಮಾಡುತ್ತಾರೆ. ಆದ್ದರಿಂದ ಈಗ ನನ್ನದು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಲಕ್ಕಪ್ಪನವರೂ ಹೇಳುತ್ತಾರೆ, ನಿಮ್ಮನ್ನೂ ಕೇಳುತ್ತೇನೆ. ಅವರಿಂದಲೂ ಕೇಳುತ್ತೇನೆ. ಅವರು ವಾಕೌಟ್ ಮಾಡುವಾಗ ಇರಿ ಎಂದು ಹೇಳುತ್ತೇನೆ. ಈಗ ಮುಖ್ಯ ಮಂತ್ರಿಗಳಿಂದ ಉತ್ತರ.....

ಶ್ರೀ ಎಂ. ಪಿ. ನಾರಾಯಣರಾವ್.—ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ.....,

ಅಧ್ಯಕ್ಷರು.—ಈ ವಿಚಾರವಾಗಿ ಯಾರು ಏನು ಹೇಳುವುದೂ ಬೇಡ, ದಯವಿಟ್ಟು ಕೂಡಿ.

ಶ್ರೀ ಆರ್. ವೆಂಕಟಾಚಲಯ್ಯ.—ದಯವಿಟ್ಟು ಕೇಳಿ, ನಾವು ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು.—ಆಮೇಲೆ ತೆಗೆದುಕೊಳ್ಳೋಣ.

ನಿಯಮ 68ರ ಮೇರೆಗೆ ಅಲ್ಪಕಲಾವಧಿ ಚರ್ಚೆ

ವಿವಿಧ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನಡೆಯಿತೆನ್ನಲಾದ ಅವ್ಯವಹಾರಗಳ ಬಗ್ಗೆ ಶ್ರೀ ಜಿ.ವಿ.ಕೆ. ರಾವ್‌ರವರು ಸಲ್ಲಿಸಿರುವ ಪರದಿ

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ೫ ನಿಮಿಷದಲ್ಲಿ ಪ್ರಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು.—ಉತ್ತಮ ಮುಗಿಯಲಿ.

ಶ್ರೀ ವೈ.ಕೆ. ರಾಮಯ್ಯ.—ಅದಕ್ಕಿಂತ ಮೊದಲು ನಾನು ಪ್ರಾತನಾಡಬೇಕು.

ಅಧ್ಯಕ್ಷರು.—ಈಗ ಕಾಂಗ್ರೆಸ್‌ನವರು ೨೧೨ ಮಿನಿಟ್ ಮಾತನಾಡಿದ್ದಾರೆ. ತಮ್ಮ ಪಾರ್ಟಿಯಿಂದ ೧೦೦ ಮಿನಿಟ್, ಸಿಪಿಐನವರು ೪೦ ಮಿನಿಟ್ ಸಿಪಿಐ (ಎಂ)ನವರು ೨೦ ಮಿನಿಟ್ ಬಿಜೆಪಿ ನವರು ೧೭ ಮಿನಿಟ ಜನತಾದಳದವರು ೧೮ ಮಿನಿಟ್ ಮಾತನಾಡಿದ್ದಾರೆ. ಹೀಗೆ ಒಟ್ಟು ಏಳೂವರೆ ತಾಸು ಚರ್ಚೆ ಆಗಿದೆ.

ಶ್ರೀ ವೈ. ಕೆ. ರಾಮಯ್ಯ —ನಾನು ಈ ನಿಮಿಷಗಳಲ್ಲಿ ಮಂಡಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರಿನಲ್ಲಿರುವಂಥ ಹೆಚ್ಚಿನ ಸಮಸ್ಯೆಗಳ ಜೊತೆಯಲ್ಲಿ ವಸತಿ ಸಮಸ್ಯೆಯೂ ಒಂದಾಗಿದೆ ಈ ಸಮಸ್ಯೆಯನ್ನು ಬಿಡಿಸಲಿಕ್ಕೆ ಬಿ.ಡಿ.ಎ. ಮತ್ತು ಹೌಸಿಂಗ್ ಬೋರ್ಡ್, ಜೊತೆಗೆ ಸಹಕಾರ ಸಂಸ್ಥೆಗಳಿವೆ. ಈ ವಸತಿ ಸಮಸ್ಯೆ ಎಷ್ಟು ಬಿಗಡಾಯಿಸಿದೆ ಅಂದರೆ, ನಾನು ಎರಡು ವರ್ಷ ಕಾಲ ಹೌಸಿಂಗ್ ಬೋರ್ಡ್ ಛೇರ್ಮನ್ ಆಗಿದ್ದೆ. ಆ ಛೇರ್ಮನ್‌ಗಿರಿ ಬಿಟ್ಟು ಹೋದಮೇಲೆ ನನಗೆ ಒಂದು ಮನೆ ಕೊಡಿ ಎಂದು ಒಂದು ಅರ್ಜಿ ಹಾಕಿದ್ದೇನೆ. ಆದರೆ ಇವತ್ತಿನ ವರೆಗೂ ಮನೆ ಸಿಕ್ಕಿಲ್ಲ, ಅದು ಬೇಡ ಹೋಗಲಿ ಹೆಚ್.ಆರ್.ಸಿ. ಯಲ್ಲಾದರೂ ಮನೆ ಕೊಡಿ ಎಂದು ಬೆಂಗಳೂರಿನಲ್ಲಿರುವಂಥ ಎಲ್ಲಾ ಹೆಚ್.ಆರ್.ಸಿ. ಆಫೀಸುಗಳಿಗೂ ಅರ್ಜಿ ಹಾಕಿದ್ದೇನೆ. ಒಂದು ಬಾಡಿಗೆ ಮನೆ ಕೂಡ ಸಿಕ್ಕಿಲ್ಲ. ಇದನ್ನು ನೋಡಿದರೆ ವಸತಿ ಸಮಸ್ಯೆ ಒಬ್ಬ ಶಾಸಕನಿಗೇ ಇಷ್ಟೊಂದು ಗಂಭೀರವಾಗಿರಬೇಕಾದರೆ ಸಾಪಾನ್ಯ ಮನುಷ್ಯನಿಗೆ ಎಷ್ಟು ಗಂಭೀರವಾಗಿರಬಹುದು ಎಂದು ನನಗನಿಸುತ್ತದೆ. ಈ ವಸತಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಬಹುಶಃ ಬೆಂಗಳೂರಿನ ಸುತ್ತಮುತ್ತ ನೂರಾರು ಸಂಸ್ಥೆಗಳು ಹುಟ್ಟಿಕೊಂಡು ಜನಸೇವೆಯನ್ನು ಮಾಡಲಿಕ್ಕೆ ಮುಂದೆ ಬಂದಿವೆ. ಇವು ಜನರನ್ನು ನೋಂದಾಯಿಸಿಕೊಂಡು ಕೆಲಸ ಮಾಡುವಂಥ ಸಂದರ್ಭದಲ್ಲಿ ಅದಂಥ ವ್ಯವಹಾರಗಳು, ಅವ್ಯವಹಾರಗಳು ಅಪರಾಧಗಳು ಸರ್ಕಾರದ ಗಮನಕ್ಕೆ ಬಂದಾಗ ಅಥವಾ ಅಧಿಕಾರಿಗಳ ಗಮನಕ್ಕೆ ಬಂದಾಗ ಇದನ್ನು ವಿಚಾರಣೆ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡು ವಿಚಾರಣೆಯನ್ನು ಮಾಡಿಸಿ ಅದರ ವರದಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಬಗ್ಗೆ ನನ್ನ ಪ್ರಶ್ನೆ ಇಷ್ಟು. ಈ ಒಂದು ವರದಿಯಲ್ಲಿ ಯಾರೂ ತಪ್ಪಿತಸ್ಥರೋ, ಸೊಸೈಟಿಗಳು ಏನು ರಿಜಿಸ್ಟರಾಗಿದ್ದಾವೋ ಆ ಸೊಸೈಟಿಗಳಲ್ಲಿ ಅವ್ಯವಹಾರವಾಗಿ ಏಜೆಂಟರು ದುಡ್ಡು ತೆಗೆದುಕೊಂಡಿದ್ದಾರೋ ಅದಕ್ಕೆ ಸರ್ಕಾರ ಏನು ಮಾಡಬೇಕಾಗಿತ್ತು, ಸರ್ಕಾರಕ್ಕೂ ಇದಕ್ಕೂ ಏನು ಸಂಬಂಧ, ಸರ್ಕಾರ ಇದಕ್ಕೆ ಏನಾದರೂ ದುಡ್ಡು ತೆಗೆದುಕೊಂಡಿದೆಯೋ, ಸರ್ಕಾರದ ಮಂತ್ರಿಗಳು ಯಾರಾದರೂ ಇನ್‌ವ್ಹಾಲ್ವ್‌ಮೆಂಟ್ ಮಾಡಿದ್ದಾರೆಯೇ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. The issue before this House is who is responsible for all these offences. There is forgery, cheating, fraud and irregularities in the societies' activities. The question is who is responsible and against whom action is to be taken. Who is responsible for all these irregularities or the offences committed by the societies and the agents? Whether this government is responsible? If anybody is responsible what action is to be taken? ಈ ಸೊಸೈಟಿಗಳನ್ನು ನೋಂದಾಯಿಸಿರತಕ್ಕದ್ದು ಒಂದು ಕಾನೂನಿನ ಚೌಕಟ್ಟಿನಲ್ಲಿ. ಆ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕ ಸಹಕಾರ ಸಂಘಗಳಲ್ಲಿ ಅಪರಾಧ ಆದಾಗ, ಅವ್ಯವಹಾರ ಆದಾಗ, ಭ್ರಷ್ಟಾಚಾರ ಆದಾಗ ಈ ಬಗ್ಗೆ ಸರ್ಕಾರವನ್ನು ನಾನು ನೇರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದರು ಎಂದು ಮಾನ್ಯ ಏಕಾಂತಯ್ಯನವರ ಸೂಚನೆ ಮೇರೆಗೆ ಇದು ವಿಚಾರಣೆಯಾಗಿದೆ ಎಂದು ನನಗೆ ತಿಳಿದು ಬಂದಿದೆ. ಅಲ್ಲಿದ್ದಂತಹ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಏನು ಮಾಡುತ್ತಿದ್ದರು, ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಏನು ಮಾಡುತ್ತಿದ್ದರು, ಕೋ ಆಪರೇಟೀವ್ ಇನ್ಸ್‌ಪೆಕ್ಟರ್ ಅವರು ಏನು ಮಾಡುತ್ತಿದ್ದರು. ಇದರ ಜೊತೆಗೆ ಮತ್ತೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಈ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ. What is the action taken by the Government after the receipt of this report? ಈ ಬಗ್ಗೆ ನಾನು ಸರ್ಕಾರದಿಂದ ಉತ್ತರವನ್ನು ಬಯಸಲಿಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಸಾರ್ವಜನಿಕರು ಹೊರಗಡೆ ಏನು ವ್ಯಾಖ್ಯಾನ ಮಾಡುತ್ತಿದ್ದಾರೆ, ಏನು ಒತ್ತು ಕೊಡುತ್ತಿದ್ದಾರೆ ಅಂದರೆ ಈ ಒಂದು ವರದಿಯನ್ನು ಅಧಿಕಾರಿಗಳು ತಯಾರು ಮಾಡಿ ಕ್ರಮ ತೆಗೆದುಕೊಳ್ಳುವ ಹಾದಿಯಲ್ಲಿ ಸರ್ಕಾರದಿಂದ ಅಧಿಕಾರಿಗೆ ಒಂದು ಪತ್ರ ಹೋಗುತ್ತದೆ.....

ಶ್ರೀ ಎಸ್. ಆರ್. ಬೊಮ್ಮಾಯಿ.....ಕಾನೂನು ಪ್ರಕಾರ ಸೆಕ್ಷನ್ ೬೪ರ ಪ್ರಕಾರ ಕ್ರಮ ತೆಗೆದು ಕೊಳ್ಳಲು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. Already we have taken action under the law.

ಶ್ರೀ ಜೆ. ಕೆ. ರಾಮಯ್ಯ — ಮಾನ್ಯ ಮುಖ್ಯಮಂತ್ರಿಗಳು ವಿಚಾರಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ, ಈ ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವ ಹಂತದಲ್ಲಿ ಸರ್ಕಾರದಿಂದ ಅಧಿಕಾರಿಗೆ ಒಂದು ಪತ್ರ ಹೋಗುತ್ತದೆ. ಅದರ ಕಂಟೆಂಟ್ಸ್ ಎಲ್ಲಾ ಆದಮೇಲೆ ಕೊನೆಯಲ್ಲಿ ಒಂದು ಪದ ಇದೆ ಏನೆಂದರೆ.....'on the ground, Otherwise the Government will be involved in the cobweb.' ಎಂದು. 'Otherwise the Government will be involved in the cobweb' ಸರ್ಕಾರದ ಕಾರ್ಯದರ್ಶಿಗಳು ಇಲಾಖಾ ಮುಖ್ಯಸ್ಥರಿಗೆ ಕಾಗದ ಬರೆಯುತ್ತಾರೆ. ಏನೆಂದರೆ, ದಯವಿಟ್ಟು ಈ ವಿಷಯದಲ್ಲಿ ಮುಂದುವರಿಯುವುದು ಬೇಡ ಎಂದು ಸರ್ಕಾರ ಜೇಡರ ಬಲೆಗೆ ಸಿಕ್ಕಿಕೊಳ್ಳುತ್ತದೆ. ಏತಕ್ಕೆ ಎನ್ನುವುದೇ ಇಲ್ಲಿ ನಮ್ಮ ಮುಂದಿರುವ ಸಮಸ್ಯೆಗಳು. ಸರ್ಕಾರ ತೊಂದರೆಗೆ ಸಿಕ್ಕಿಕೊಳ್ಳುತಕ್ಕ ಸಮಸ್ಯೆಗಳು ಇದರಲ್ಲಿ ಏನು ಇದೆ ಅದು ನಮ್ಮ ಗಮನಕ್ಕೆ ಬರಬೇಕು. ಸರ್ಕಾರಕ್ಕೂ ಸೊಸೈಟಿಗೂ ಸಂಬಂಧ ಇಲ್ಲ. ಸರ್ಕಾರ ಸೊಸೈಟಿಗಳನ್ನು ನಡೆಸಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರ್ಯದರ್ಶಿಗಳು ತಮ್ಮ ಪತ್ರದಲ್ಲಿ ಸರ್ಕಾರ ತೊಂದರೆಗೆ ಸಿಕ್ಕಿಕೊಳ್ಳುತಕ್ಕ ಸಂದರ್ಭ ಏರುವುದರಿಂದ, ಅಂತಹ ಸನ್ನಿವೇಶ ಇರುವುದರಿಂದ, ಅಂತಹ ಒಂದು ಸಂದರ್ಭ ಬರುವುದರಿಂದ, ದಯಮಾಡಿ ಮುಂದಿನ ಕಾರ್ಯಕ್ರಮ ನಿಲ್ಲಿಸಿ ಎಂದು ಸರ್ಕಾರದಿಂದ ಅಧಿಕಾರಿಗಳಿಗೆ ಪತ್ರ ಹೋಗುತ್ತದೆ. ಅಧ್ಯಕ್ಷರೆ, ನಾನು ಸರ್ಕಾರವನ್ನು ತಮ್ಮ ಮುಖಾಂತರ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದು ಬಹಳ ಸಿಂಪಲ್ ಕ್ವೆಶ್ಚನ್ ಏನೆಂದರೆ, What is the trouble that the government is going to be involved if it is continued ? ಇದು ಒಂದು ಬಹಳ ಪ್ರಾಮುಖ್ಯವಾದಂಥ ಸಮಸ್ಯೆ. ಇದಕ್ಕೆ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಅಧ್ಯಕ್ಷರೆ, ನನ್ನ ಮಿತ್ರರಾದಂಥ ಮತ್ತು ಈ ಮನೆಯ ಸದಸ್ಯರಾದಂಥ ಏಕಾಂತಯ್ಯನವರು ನಮ್ಮನ್ನು ಕುರಿತು ಈಗತಾನೇ ವಿರೋಧಪಕ್ಷಕ್ಕೆ ಹೋದಂಥ ಮಿತ್ರರು ಎಂದು ಸಂಬೋಧನೆ ಮಾಡಿದ್ದಾರೆ. ನಾನು ಏಕಾಂತಯ್ಯನವರನ್ನು ಬಲ್ಲೆ. ನಾವು ಇಲ್ಲಿ ಬಂದು ವಿರೋಧ ಪಕ್ಷದವರು ಎಂದು ಹೇಳಿಕೊಂಡು ಕಾಲಿತ್ತಿದ್ದೇವೆ. ಆದರೆ ಅವರು ಅಲ್ಲಿಯೇ ಕುಳಿತುಕೊಂಡು ವಿರೋಧಪಕ್ಷದವರ ಮನೋಭಾವ ಇಟ್ಟುಕೊಂಡು ಮಾತನಾಡಿದ್ದಾರೆ. ಅಷ್ಟೇ ವ್ಯತ್ಯಾಸ. ಅವರಿಗೂ ನಮಗೂ ಬೇರೆ ಏನೂ ವ್ಯತ್ಯಾಸ ಇಲ್ಲ. ಈ ವ್ಯವಹಾರಗಳು ನಡೆದಾಗ ನಮ್ಮ ಮಿತ್ರರು ಏನು ಮಾಡಿದರು ಎಂದು ಅವರು ಕೇಳಿದರು. ಈ ಅವ್ಯವಹಾರ ಹೇಳಿದಾಗ ಅವರ ಮತ್ತು ನನ್ನ ಮಧ್ಯದಲ್ಲಿ ನಡೆದ ಚರ್ಚೆ ಅವರಿಗೆ ಗೊತ್ತಿದೆ ನಮಗೆ ಗೊತ್ತಿದೆ, ಅದನ್ನು ಮತ್ತೆ ಹೇಳುವಂಥ ಅವಶ್ಯಕತೆ ಇಲ್ಲ. ನಾನು ಏನು ಹೇಳಬೇಕೋ ಅಷ್ಟನ್ನೇ ಹೇಳುತ್ತೇನೆ. ಮಾನ್ಯ ಏಕಾಂತಯ್ಯನವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಒಂದು ಸಮಸ್ಯೆಯನ್ನು, ಅವ್ಯವಹಾರಗಳನ್ನು ಅವರ ಗಮನಕ್ಕೆ ತಂದಾಗ ಅವರು ಪಟ್ಟಂತಹ ನೋವು ಅಡಿದುತಹ ಪಾತು ಬಹುಶಃ ಸಾರ್ವಜನಿಕ ಜೀವನದಲ್ಲಿ ಸ್ವೀಕ್ವಿಯಾಗಿ ಬದುಕುವಂತಹ ಒಬ್ಬ ರಾಜಕಾರಣಿಯ ಪಾತನ್ನು ಅವರು ಆಡಿದ್ದಾರೆ ಅದನ್ನು ನಾನು ಈ ಸಭೆಯ ಮುಂದೆ ಹೇಳಲಿಕ್ಕೆ ಇಷ್ಟಪಡುವುದಿಲ್ಲ. It is not at the instance of the officer that the investigation has started. It is at the instance of Sri Ekanthaiah that the investigation has started. I congratulate him. I compliment wherever he is. ಇಂತಹವರನ್ನು ನಾನು ಸ್ವಾಗತಿಸುತ್ತೇನೆ. ಇಂತಹವರನ್ನು ನಾನು ಅಭಿನಂದಿಸುತ್ತೇನೆ. ಸರ್ಕಾರಕ್ಕೆ ಈ ಒಂದು ವ್ಯವಹಾರದಲ್ಲಿ ಯಾವುದೇ ಒಂದು ಇನ್‌ವಾಲ್ವ್‌ಮೆಂಟ್ ಇಲ್ಲ. ಯಾವುದೇ ಒಂದು ಕೈವಾಡ ಇಲ್ಲವೆಂದು ಹೇಳುವುದಾದರೆ ಮಂತ್ರಿಮಂತ್ರಿಗಳ ಛೇಂಬರ್‌ನಲ್ಲಿ ಸಭೆಯನ್ನು ಮಾಡಿ ಈ ವರದಿಯ ಆಧಾರದ ಮೇಲೆ ಅಧಿಕಾರಿಗಳು ಮುಂದೆ ಏನೂ ಕ್ರಮ ತೆಗೆದುಕೊಳ್ಳಬಾರದು ಎನ್ನುವಂಥ ನಿರ್ದೇಶನವನ್ನು ಮುಖ್ಯಸ್ಥರಿಗೆ ಕೊಟ್ಟ ಕಾರಣವನ್ನು ಈ ರಾಜ್ಯದ ನಾಲ್ಕು ಕೋಟಿ ಜನ ತಿಳಿದುಕೊಳ್ಳಲಿಕ್ಕೆ ಇಷ್ಟಪಡುತ್ತಾರೆ. ಈ ರಾಜ್ಯದ ಒಬ್ಬ ಪ್ರಮುಖ ಅಧಿಕಾರಿ ಈ ವರದಿಯನ್ನು ತಯಾರಿಸಿ ಇದರಲ್ಲಿ ಅವ್ಯವಹಾರ ಆಗಿದೆ, ಅಪರಾಧವಾಗಿದೆ, ಅನ್ಯಾಯವಾಗಿದೆ ಎಂದು ಏನು ಈ ವರದಿಯನ್ನು ಕೊಟ್ಟರೋ ಆ ವರದಿಯ ಆಧಾರದ ಮೇಲೆ ನೀವು ಮುಂದುವರಿಯುಬೇಡಿ ಎಂದು ಇಲಾಖೆಯ ಮುಖ್ಯಸ್ಥರಿಗೆ ಸರ್ಕಾರದಿಂದ ನಿರ್ದೇಶನ ಏನು ಕೊಟ್ಟಿದ್ದಾರೆ, ಇದರ ಕಾರಣವನ್ನು ನಾನು ಕೇಳುವುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರಿಂದ ನಾನು ಉತ್ತರವನ್ನು ಪಡೆಯಬಯಸುತ್ತೇನೆ. ಸಾರ್ವಜನಿಕ ಜೀವನದಲ್ಲಿ

ಎಲ್ಲ ಕ್ಷೇತ್ರಗಳಲ್ಲೂ ದಳ್ಳುಳಿಗಳು ಕಡಿವೆಯಾಗುತ್ತಿರುವಾಗ ಈ ಕ್ಷೇತ್ರದಲ್ಲಿ ಮಾತ್ರ ಜಾಸ್ತಿಯಾಗುತ್ತಿರುವುದಕ್ಕೆ ಕಾರಣ.....

ಅಧ್ಯಕ್ಷರು.—ಈಗಾಗಲೇ ಬಹಳ ಜನ ಮಾನ್ಯ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ. ಸುಮಾರು ೭ ತಾಸು ಚರ್ಚೆ ಆಗಿದೆ. ನೀವು ಹೇಳಿದ್ದನ್ನೆಲ್ಲಾ ಬೇರೆ ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚಿತವಾಗಿ ಸರ್ಕಾರದಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ಅವ್ಯವಹಾರ ತಮ್ಮ ಮುಂದಿದೆ. ಇದರಲ್ಲಿ ಅವ್ಯವಹಾರವಾಗಿದೆಯೆಂದು ಹೇಳಿದ್ದಾರೆ, Kindly take action to arrest them first and put them behind the bars. Let the people of Karnataka know it. ಇನ್ನು ಎರಡನೆಯದಾಗಿ, ಮುಯುವಿಟ್ಟು ಇನ್ನು ಮುಂದೆ ಇಂಥ ಅವ್ಯವಹಾರಗಳು ಆಗದ ರೀತಿಯಲ್ಲಿ ಕಾನೂನುಗಳನ್ನು ತರಬೇಕಾಗಿದೆಯೆಂದು ಮಾನ್ಯ ಏಕಾಂತಯ್ಯನವರು ಏನು ಹೇಳಿದ್ದಾರೆ ಅಂಥ ಕಾನೂನುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಹಿಂದೆ ಈ ದೇಶದಲ್ಲಿ ಲಂಚ ಪಡೆದವರನ್ನು ನೇಣು ಹಾಕುವುದಕ್ಕೆ ಆಗಿಲ್ಲ, ಚಾಟಿಯಿಂದ ಹೊಡೆಯುವುದಕ್ಕೆ ಆಗಿಲ್ಲ. ಆದ್ದರಿಂದ ಇಷ್ಟು ಹಾಳು ಮಾಡಬಹುದೆಂದು ನನ್ನ ಸಲಹೆ ಇದೆ. ಏನೆಂದರೆ, ಸಿ.ಬಿ.ಐ. ಎನ್‌ಕ್ವೈರಿಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದಕ್ಕೆ ಕಾರಣವಾದರೂ ಇಷ್ಟೆ, ಈ ರಿಪೋರ್ಟ್‌ನಲ್ಲಿರುವ ಒಂದೇ ಒಂದು ವಾಕ್ಯವನ್ನು ಓದಿ ನನ್ನ ವಾದಕ್ಕೆ ಒತ್ತನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಸಿ. ಒ. ಡಿ.ಯವರು ವಿಚಾರಣೆಯನ್ನು ಮಾಡಿದರೆ. ಅಂದರೆ ಕರ್ನಾಟಕ ರಾಜ್ಯದ ಪೋಲೀಸರು ವಿಚಾರಣೆಯನ್ನು ಮಾಡಿದರೆ. ಈ ರಾಜ್ಯದ ವ್ಯಾಪ್ತಿಯಲ್ಲಿ ಮಾತ್ರ ಮಾಡಲಿಕ್ಕೆ ಸಾಧ್ಯ. ಆದರೆ ಇದರಲ್ಲಿ ರಾಜ್ಯದ ವ್ಯಾಪ್ತಿ ಮತ್ತು ರಾಷ್ಟ್ರದ ವ್ಯಾಪ್ತಿಯನ್ನು ವಿಸ್ತರಿಸಿ ಆಜೆಗೆ ಹೊಗಿರುವುದರಿಂದಲೇ ಇದರ ಬಗ್ಗೆ ಸಿ. ಬಿ. ಐ.ತನಿಖೆ ಆಗಬೇಕೆಂದು ನಾನು ಹೇಳುತ್ತಿರುವುದು. ಇಲ್ಲಿ ಪುಟ ೨೫ರಲ್ಲಿ ಇರತಕ್ಕ ಒಂದೇ ಒಂದು ವಾಕ್ಯವನ್ನು ನಾನು ಓದಿ ಹೇಳಲಿಕ್ಕೆ ಇಷ್ಟಪಡುತ್ತೇನೆ. "The way that such societies are admitting the members from Bombay, Mangalore Mysore, Kolor, Andaman Secunderabad. etc., makes it clear that they have absolutely no intention of following the bye-laws." ಎಂದಿದೆ ಆದ್ದರಿಂದ ಸಿ. ಬಿ. ಐ ನಿಂದಲೇ ಏತಕ್ಕೆ ಎನ್‌ಕ್ವೈರಿ ಆಗಬೇಕೆಂದರೆ ಈ ವ್ಯವಹಾರವೆಲ್ಲಾ ಅಂತರರಾಷ್ಟ್ರೀಯ ಮಟ್ಟದಲ್ಲಿರುವುದರಿಂದ. ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಸಿ. ಬಿ. ಐ. ಎನ್‌ಕ್ವೈರಿಗೆ ಆದೇಶ ನೀಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಂಡು ಇಷ್ಟು ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಪೊಟ್ಟ ಮೊದಲನೆಯದಾಗಿ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಮಾತನಾಡುವಾಗ ಈ ವರದಿಯನ್ನು ಸಭೆಯ ಮುಂದಿಟ್ಟ ಬಗ್ಗೆ ಸ್ವಾಗತವನ್ನು ಮಾಡಿದ್ದಾರೆ. ಮತ್ತು ಇದರ ಜೊತೆಯಲ್ಲೇ ಇನ್ನೂ ಒಂದು ಮಾತನ್ನು ಏನು ಹೇಳಿದ್ದಾರೆಂದರೆ, ಈ ವರದಿಯನ್ನು ಪೂರ್ತಿ ಇಟ್ಟಿಲ್ಲವೆಂತಲೂ ಹೇಳಿದ್ದಾರೆ. ಇನ್ನೊಂದು ಸಂಶಯವನ್ನು ಏನು ವ್ಯಕ್ತಮಾಡಿದ್ದಾರೆಂದರೆ ಈ ವಿಚಾರದಲ್ಲಿ ಚರ್ಚೆಗೆ ಸರ್ಕಾರ ಸಿದ್ಧವಾಗಿಲ್ಲ, ಇದನ್ನು ತಡೆಯತಕ್ಕ ಪ್ರಯತ್ನವನ್ನು ಮಾಡಿದೆಯೆಂದೂ ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ. ಇದು ಸಾರ್ವಜನಿಕರ ಗಮನವನ್ನು ಸೆಳೆದಂಥ ವಿಚಾರವೆಂದು ನಾನು ಈಗಾಗಲೇ ಹೇಳಿದ್ದೇನೆ ಇದರಲ್ಲಿ ಸಾವಿರಾರು ಎಕರೆ ಜಮೀನನ್ನು ಆಕ್ವೈರ್ ಮಾಡಿಕೊಂಡು ಸೊಸೈಟಿಗಳಿಗೆ ಕೊಟ್ಟಿರತಕ್ಕ ವ್ಯವಹಾರ ಇದೆ. ಲಕ್ಷಾಂತರ ಜನರು ಈರೀತಿಯ ಸಹಕಾರ ಸಂಘಗಳ ಮೂಲಕ ನಿವೇಶನಗಳನ್ನು ಪಡೆಯುತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಇದರ ಬಗ್ಗೆ ಆ ಎಲ್ಲ ಜನರ ಗಮನವೂ ಇದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಈ ವಿಚಾರದಲ್ಲಿ ಸಾಕಷ್ಟು ಇಲ್ಲಿ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಬೇಕಾಗಿದೆ. ಮೊದಲನೆಯದಾಗಿ ಬೆಂಗಳೂರು ನಗರ ಬಹಳವಾಗಿ ಬೆಳವಣಿಗೆ ಆಗುತ್ತಿದೆ. ಈ ನಗರದ ಜನಸಂಖ್ಯೆ ಸುಮಾರು ೪೦ ಲಕ್ಷ. ಈ ಜನ ಸಂಖ್ಯೆಯನ್ನು ನಿಯಂತ್ರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಗರದ ಬೆಳವಣಿಗೆಗೆ ಮಿತಿಯನ್ನು ಹಾಕುವುದಕ್ಕೂ ಸಾಧ್ಯವಾಗುತ್ತಿಲ್ಲ. ಎಷ್ಟು ಲೇಔಟ್, ಮನೆಗಳನ್ನು ಕಟ್ಟಿದರೂ ಸಾಕಾಗುತ್ತಿಲ್ಲ. ಇದು ಸಾಧ್ಯವಾಗುವುದಿಲ್ಲ

ವೆನ್ನುವದು ನನ್ನ ಭಾವನೆಯಾಗಿದೆ. ಆದರೆ ನಗರಕ್ಕೆ ಬಂದಂಥ ಜನರೆಲ್ಲರೂ ವಾಸಮಾಡಲೇಬೇಕು. ವಸತಿ ಸವಲತ್ತೆ ಎಷ್ಟಿದೆ ಎಂಬುದನ್ನು ಮಾನ್ಯ ರಾಮಯ್ಯನವರು ಹೇಳಿದರು. ಇವತ್ತು ಬಾಡಿಗೆ ಮನೆಯನ್ನು ಪಡೆಯಬೇಕಾದರೆ ಅದಕ್ಕೆ ಎಷ್ಟು ಹಣವನ್ನು ಕೊಡಬೆ ಕಾಗುತ್ತದೆ ಎನ್ನುವದನ್ನೂ ಕೂಡ ನೋಡಿದ್ದೇವೆ. ರೆಂಟ್, ಡಿಪಾಸಿಟ್ ಎಂದು ಹೇಳುತ್ತಾ ಬೇರೆ ಬೇರೆ ರೀತಿಯಲ್ಲಿ ಬಾಡಿಗೆ ಮನೆಯನ್ನು ಮಾಡಲಿಕ್ಕೆ ಹೋದರೆ ಅಲ್ಲಿಯೂ ಕೂಡ ಒಂದು ರೀತಿಯಾದ ಸುಲಿಗೆ ನಡೆಯುತ್ತದೆ. ಇದೆಲ್ಲವನ್ನೂ ಮಾನ್ಯ ಸದಸ್ಯರು ಹೇಳಿದ್ದಾರೆ. ಒತ್ತಡಕ್ಕೆ ಒಳಗಾಗಿ ಇಲ್ಲಿ ಬಂದಂಥ ವಾಗರಿಕ ತನ್ನ ಜೀವನಿಂ ಕಾನೂನು ಪ್ರಕಾರ ಹೆಚ್ಚಿಗೆ ಕೊಡಬಾರದೆಂದು ನಿಯಮವಿದ್ದರೂ ಹೆಚ್ಚು ಕೊಡತಕ್ಕಂಥ ಒತ್ತಡಕ್ಕೆ ಒಳಗಾಗುತ್ತಾನೆ. ಈ ಎಲ್ಲ ಕಾರಣಗಳಿಂದ ಬಿ. ಡಿ. ಎ. ಮುಖಾಂತರ ಎಷ್ಟೆಷ್ಟು ಸೈಟುಗಳನ್ನು ಹಂಚಬೇಕೆಂದು ನಾವು ಪ್ರಯತ್ನ ಪಟ್ಟಿದ್ದೇವೆ ಎಷ್ಟು ಜನರಿಗೆ ಹಂಚಿದ್ದೇವೆಂದು ಹೇಳಿದರೆ ಸುಮಾರು ೪೦ ಸಾವಿರ ಸೈಟುಗಳನ್ನು ಹಂಚಿದ್ದೇವೆ. ಅದಕ್ಕೂ ಹೆಚ್ಚೀನು ಇಲ್ಲ. ಈಗ ಬಿ. ಡಿ. ಎ. ಮುಂದೆ ಇರತಕ್ಕಂಥ ಅರ್ಜಿಗಳು ಸುಮಾರು ೭೦ ಸಾವಿರದಷ್ಟು. ಇಷ್ಟು ಅರ್ಜಿಗಳು ಪೆಂಡಿಂಗ್ ಇವೆ. ಹತ್ತು ಸಲ ಅರ್ಜಿಗಳನ್ನು ಹಾಕಿದವರಿಗೂ ಇನ್ನೂ ಸೈಟ್ ಸಿಕ್ಕಿಲ್ಲ. ಆ ವಿವರಕ್ಕೆ ಆಮೇಲೆ ಬರುತ್ತೇನೆ ವಸತಿ ಸೌಕರ್ಯದ ಅವಶ್ಯಕತೆ ಬಹಳ ವಾಗಿ ಇದೆ. ಆ ದೃಷ್ಟಿಯಿಂದ ಸರ್ಕಾರ ೧೯೭೯ ರಿಂದಲೂ ಸೊಸೈಟಿಗಳಿಗೆ ಜಮೀನನ್ನು ಕೊಡುತ್ತಾ ಬಂದಿದೆ ರಿಜಿಸ್ಟರಾದ ಸೊಸೈಟಿಗಳ ತಾಗೀತಿನ್ನು ಕೊಟ್ಟಿದ್ದೇನೆ. ಬಹುತೇಕ ಸೊಸೈಟಿಗಳು ೨೦-೨೫ ವರ್ಷಗಳ ಹಿಂದೆಯೇ ಸ್ಥಾಪನೆಯಾಗಿವೆ. ೧೯೮೫ ರಿಂದ ಸ್ಥಾಪನೆ ಆದಂಥ ಸೊಸೈಟಿಗಳು ೯. ಇದರಲ್ಲಿ ಆರು ಸೊಸೈಟಿಗಳು ಎಂಪ್ಲಾಯಿಸ್ ಸೊಸೈಟಿಗಳು ಈ ಸೊಸೈಟಿಗಳು ಮೊದಲೇ ಇದ್ದುವು.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಸ್ಟೇಟ್‌ಮೆಂಟ್ ಪ್ರಕಾರ ೬ ಸೊಸೈಟಿಗಳು.

ಶ್ರೀ ಎಸ್. ಆರ್. ಬೊಮ್ಮಾಯಿ.—Only nine societies. ಇಲ್ಲಿ ಒಟ್ಟು ಸೊಸೈಟಿಗಳನ್ನು ನಿರ್ಬಂಧ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ೧೯೮೫ ಕ್ಕಿಂತ ಮೊದಲು ೨೭೯೪ ಎಕರೆ ಭೂಮಿಯನ್ನು ಸೊಸೈಟಿಗಳಿಗೆ ಕೊಟ್ಟಿದ್ದಾರೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ಅನ್ನು ನೋಟಿಫೈ ಮಾಡಿದ್ದಾರೆ. ಅನಂತರ ಇತ್ತೀಚೆಗೆ ಅದಂಥ ನೋಟಿಫಿಕೇಶನ್ ಏನೂ ಇದೆ ಅದರ ಪ್ರಕಾರ ಜಮೀನನ್ನು ಆಕ್ವಯರ್ ಮಾಡಾಲಿಕ್ಕೆ ಪ್ರಪೋಸಲ್ಸ್ ಇದೆ, ಎಂಪ್ಲಾಯಿಸ್ ಸೊಸೈಟಿಗಳಿಗೆ ೫೫೮೮ ಎಕರೆ. ಸ್ಟೇಟ್ ಗೌವರ್ನಮೆಂಟ್ ಎಂಪ್ಲಾಯಿಸ್, ಸ್ಟೇಟ್ ಪಬ್ಲಿಕ್ ಸರ್ವಾರ್. ಸೆಂಟ್ರಲ್ ಗವರ್ನಮೆಂಟ್ ಸರ್ವಾರ್. ಖಾಸಗಿ ಸೊಸೈಟಿಗಳು ಎಲ್ಲಸೇರಿ ೫೦೩೨. ಸುಮಾರು ಅರ್ಧಕ್ಕಿಂತ ಹೆಚ್ಚು ಎಂಪ್ಲಾಯಿಸ್ ಸಂಸ್ಥೆಗಳವೆ ಇದರಲ್ಲಿ ಮೊದಲು ರಾಜಾರೀತಿ ಅರ್ಜರ್ ಮಾಡಿ ಹೋಗಿದ್ದಾರೆ ನೀವು ಹೇಳಿ ಎಂದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಧಿಕಾರ ಇತ್ತು ಮಾಡಿದರು. ಮಾನ್ಯ ಮುಖ್ಯಮಂತ್ರಿಗಳು ರಾಜಾರೀತಿ ಆಜ್ಞೆ ಮಾಡಿದರು ಏನೂವುದನ್ನು ಹೇಳುವುದಿಲ್ಲ There was no machinery to investigate the bonafides of membership. ಫೈಲ್‌ವೇಲೆ ಆರ್ಡರ್ಸ್ ಆಗಿದೆ ಅದು ತಪ್ಪೆಂದು ಹೇಳುವುದಿಲ್ಲ. ಆಗ ಮುಖ್ಯ ಮಂತ್ರಿಗಳಿಗೆ ಅಧಿಕಾರ ಇತ್ತು. ಸೊಸೈಟಿಯವರು ಅರ್ಜಿ ಕೊಟ್ಟಿದ್ದರು. ಹಾಗೆ ಅವರು ಆಜ್ಞೆ ಮಾಡಿದ್ದಾರೆ. ನೇರವಾಗಿ ಆಜ್ಞೆಗಳು ಅಧಿಕಾರಿಗಳಿಗೆ ಹೋಗಿವೆ.

ಶ್ರೀ ಬಿ. ಬಸವಲಿಂಗಪ್ಪ.—ಯಾವಾಗ ?

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೦ ರಿಂದ ೧೯೮೫ ರ ವರೆಗೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಮಾಡುತ್ತಾರೆಂದು ನೀವು ಮಾಡುತ್ತೀರಾ ? ನೀವು ಮಾಡ ಬೇಕೆಂದು ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೂ ಉತ್ತರಿಸುತ್ತೇನೆ. ನಿಮ್ಮ ನೈತಿಕ ಬಲದ ಬಗ್ಗೆಯೂ ಹೇಳುತ್ತೇನೆ, ನೀವು ರೆವಿನ್ಯೂ ಮಂತ್ರಿಯಾಗಿದ್ದಾಗ ಏನೇನು ಆಗಿದೆ ಅದಕ್ಕೂ ಉತ್ತರಿಸುತ್ತೇನೆ.

SRI B. BASAVALINGAPPA.—Do it, What you have done, what I have done. You can tell to the House.

ಶ್ರೀ ಜಿ ನಾರಾಯಣ ಕುಮಾರ್.—ಉತ್ತರ ಹೇಳುವುದಕ್ಕೆ ಮುಖ್ಯ ಮಂತ್ರಿಗಳಿಗೆ ಅವಕಾಶ ಕೊಡಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅವರು ಅನೇಕ ಸುಧಾರಣೆಗಳನ್ನು ಮಾಡಿದ್ದಾರೆ ಆದರೆ ನಿಮ್ಮ ರೀತಿ ಮಾಡಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲನೆಯದಾಗಿ ಸರ್ಕಾರ ಬಂದಮೇಲೆ ಮಂತ್ರಿ ಮಂಡಲ ನಿರ್ಣಯ ತೆಗೆದುಕೊಂಡಿದೆ. ನಾನು ಈಗ ಆ ವಿವರಗಳಿಗೆ ಹೋಗುವುದಿಲ್ಲ. ಮೊದಲು ಸೊಸೈಟಿಗಳು ಏನು ರಿಜಿಸ್ಟರ್ಡ್ ಆಗಿವೆ ಅಂಥ ಸೊಸೈಟಿಗಳ ಬಗ್ಗೆ ಒಂದು ನಿರ್ಣಯವನ್ನು ತೆಗೆದು ಕೊಂಡಿದ್ದೇವೆ. ಸ್ಪಷ್ಟವಾದ ನಿರ್ಣಯ ಇದೆ.

> 'cut off date for registration of societies will not be extended beyond 30th June, 198 . Societies registered subsequent to that date will have to approach B. D. A. for bulk allotment of land. According to Government Order dated 18th June, 1985 inrespect of 128 societies already approved by the Cabinet first membership entertained by the society be extended to the land which is already available with them. This is subject to the condition by agreement for purchase of land has been entered into before 30th June. This condition will apply to all those societies as well as other societies. Registered before 1-6-84 and if they entered into agreement with the land owner before that day.'

ಅಂದರೆ ಲ್ಯಾಂಡ್ ಓನರ್ಸ್ ಖರೀದಿ-ಕರಾರು ಮೊದಲೇ ಅಗ್ರಿಮೆಂಟ್ ಮಾಡಿಕೆ ಂಡಿದ್ದರೆ ಅಂಥವರಿಗೆ ಮಾತ್ರ it has been extended ಈ ವಿಚಾರ ಹೇಳುವಾಗ ಮೊದಲನೆಯದಾಗಿ ಮೂಲಭೂತ ವಾದಂಥ ಎರಡು ವಿಚಾರಗಳನ್ನು ನಾವು ಮರೆಯಬಾರದು. ಮೊದಲನೆಯದಾಗಿ ವಸತಿ ಹೀನವಾದೆ ಆದರಲ್ಲೂ ನಗರದಲ್ಲಿ ತಲೆ ಮೇಲೆ ಒಂದು ಸೂರು ಇರಬೇಕು ಎಂಬ ಉತ್ಕಟೇಚ್ಛೆಯುಳ್ಳ ಮಧ್ಯಮ ವರ್ಗದವರು, ಬಡವರು ಹಾಗೂ ಕಾರ್ಮಿಕರು, ಈ ಸೊಸೈಟಿಗಳಲ್ಲಿದ್ದಾರೆ. ಸುಮಾರು ೬೦ ಪರ್ಸೆಂಟ್ ಕಾರ್ಮಿಕರು ಇದರಲ್ಲಿದ್ದಾರೆ. ಅವರ ಒಂದು ಇಚ್ಛೆ ಏನಿದೆ ಅದು ಪ್ರತಿಯೊಬ್ಬರಿಗೂ ಮನವರಿಕೆಯಾಗುತ್ತದೆ. ಪ್ರತಿಯೊಂದು ಕುಟುಂಬಕ್ಕೂ ಒಂದು ಮನೆ ಇರಬೇಕೆಂಬ ದೃಷ್ಟಿಯಿಂದ ಅವರಿಗೆ ಅನುಕೂಲ ವಾಗತಕ್ಕ ಉದ್ದೇಶದಿಂದ ಸರ್ಕಾರ ಈ ನಿರ್ಣಯವನ್ನು ತೆಗೆದುಕೊಂಡಿದೆ. ಕಟ್ ಆಫ್ ಡೇಟ್ಸ್ ಇನ್ನು ಫಿಕ್ಸ್ ಮಾಡಿದೆ. ಇದರ ಜೊತೆಗೆ ಒಂದು ಅಂಶ ಹೇಳುವುದನ್ನು ಎಲ್ಲರೂ ಮರೆತು ಬಿಟ್ಟಿದ್ದಾರೆ. ಈ ಭೂಮಿ ಸರ್ಕಾರಿ ಭೂಮಿ ಅಲ್ಲ. ಬಿಡಿಎ. ವಿಚಾರ ಹೇಳಿ ಅಥವಾ ಬಿಡಿ. ಬಿ. ಡಿ. ಎ. ಆಕ್ವಿಜಿಷನ್ ಮಾಡಿದ ಲ್ಯಾಂಡನ್ನು ಕೊಟ್ಟಿದ್ದು ಇದೆ. ಬಹುತೇಕವಾಗಿ ಬಿ. ಡಿ. ಎ. ಯವರು ಅಕ್ವಿಯರ್ ಮಾಡಿರುವುದು ಕೂಡ ಖಾಸಗಿ ಒಡೆತನದ ಭೂಮಿಯನ್ನು. ಖಾಸಗಿ ಭೂಮಿಯನ್ನು ಸಹಕಾರ ಸಂಘಗಳು ಖರೀದಿ ಮಾಡುತ್ತವೆ. ಒಪ್ಪಂದ ಮಾಡಿಕೊಳ್ಳುತ್ತವೆ. ಅದನ್ನು ಸರ್ಕಾರ ಮಾಡುವುದಿಲ್ಲ.

SRI B. BASAVALINGAPPA.—Spurious documents ....

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ನೋಡೋಣ, ಓನರ್ ಬಗ್ಗೆ ನಾನು ಡಿಸ್ಕಸ್ ಮಾಡುತ್ತಿಲ್ಲ. ಡಾಕ್ಯುಮೆಂಟ್ಸ್ ಕ್ಲಿಯರ್ ಆಗಿದೆ. ಇಲ್ಲ ಎಂಬ ವಾದ ಬೇರೆ. Land owner has entered into agreement. It is a private land, private people agreed to the sale of those lands to these societies. On the basis of the agreement which is already entered into by the owners, if the society go for acquisition proceedings ..

5.30 P.M.

SRI B. BASAVALINGAPPA.—What is the verdict of the G.V.K. Rao Report?

SRI S. R. BOMMAI.—Why do you interfere. ನಾನು ಉತ್ತರ ಕೊಟ್ಟಮೇಲೆ ನಿಮ್ಮ ಹೇಳಿ. ನಾನು ರಿಪೋರ್ಟ್ ಬಗ್ಗೆ ಮಾತನಾಡುತ್ತೇನೆ. It is not a compulsory acquisition, it is a sen because the agreements have been entered

into by the societies with land owners. With the consent of land owners and at the instance of the societies acquisition proceedings have commenced. ಆಮೇಲೆ ಈ ವಿಚಾರದಲ್ಲಿ ಹೇಳಿದರು, ಮೂಲಭೂತವಾದ ಪ್ರಶ್ನೆಯನ್ನು ನಾವೆಲ್ಲರೂ ಮರೆತಿದ್ದೇವೆ. ಏತಕ್ಕೆ ಈ ಪ್ರಶ್ನೆ ಬಂತು ? ಸರ್ಕಾರ ಪ್ರೈವೇಟ್ ಆಗಿ ಏತಕ್ಕೆ ಅಗ್ರಿಮೆಂಟ್ ಮಾಡಬೇಕಾಗಿತ್ತು ? ಇಷ್ಟು ದೊಡ್ಡ ಪ್ರಮಾಣದಲ್ಲಿ ಏತಕ್ಕೆ ಅಕ್ವಿಜಿಷನ್ ಮಾಡಬೇಕಾಗಿತ್ತು ಎಂಬ ಪ್ರಶ್ನೆ ಏಳುತ್ತದೆ. ನೂರಾರು ಎಕರೆ ಏತಕ್ಕೆ, ಸಾವಿರಾರು ಎಕರೆ ಏತಕ್ಕೆ? ಕಾರಣ ಇಷ್ಟೆ. ಕರ್ನಾಟಕದ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ನಾವು ಕಾನೂನನ್ನು ಸ್ಪಷ್ಟವಾಗಿ ರಚಿಸಿದ್ದೇವೆ ಅದರಲ್ಲಿ, no society or company can own the agricultural land ಎಂದು ಇದೆ. ಈ ಕಾನೂನು ಇಲ್ಲದೇ ಹೋಗಿದ್ದರೆ ಸರ್ಕಾರ ಮಧ್ಯೆ ಪ್ರವೇಶಿಸುವ ಅವಶ್ಯಕತೆ ಇರಲಿಲ್ಲ. They would have purchased the land by themselves. ಸರ್ಕಾರ ಅಕ್ವಿಸಿಷನ್ ಮಾಡುವುದು, ದಳ್ಳಾಳಿಗಳು ಬರುವುದು ಅವಶ್ಯಕತೆ ಇರಲಿಲ್ಲ. ಜೆಪ್ಪಿಯಲ್ಲಾಗಲಿ, ಬಾಂಬೆಯಲ್ಲಾಗಲೀ, ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಾಗಲೀ, ಎಲ್ಲಾ ಕಡೆ ನಗರಗಳು ಬೆಳೆದಿವೆ. ಅಲ್ಲಿ ಸಹ ಸೊಸೈಟಿಗಳು ಬೆಳೆದಿವೆ. ಆದೆ ಅಗ್ರಿಕಲ್ಚರಲ್ ಲಾಂಡ್ ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಆಗಿದೆ. ಅಲ್ಲಿ ಸೊಸೈಟಿಗಳಿಗೆ ಇಷ್ಟು ತೊಂದರೆ ಇಲ್ಲ. ಕಾರಣ ಏನೆಂದರೆ societies can directly enter into an agreement and purchase it. ಜಮೀನು ತೆಗೆದುಕೊಂಡ ಮೇಲೆ ಕಾನೂನು ಪ್ರಕಾರ ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಮಾಡುವುದಕ್ಕೆ ಹಣ ಕೊಡುತ್ತಾರೆ. ನಂತರ ಸರ್ಕಾರ ಅನುಮತಿ ಕೊಡುತ್ತದೆ. ಟೌನ್ ಪ್ಲಾನ್ ನಿಯಮಕ್ಕೆ ಅನುಗುಣವಾಗಿ ಕಾನೂನು ಪ್ರಕಾರ ಅಲ್ಲಿ ನಡೆಯುತ್ತಿದೆ. ಬಾಂಬೆಯಲ್ಲಿ ಲಕ್ಷಾಂತರ ಜನರಿಗೆ ಸೊಸೈಟಿಗಳ ಮುಖೇನ ಮನೆಗಳು ಸಿಕ್ಕಿವೆ. ಡೆಲ್ಲಿಯಲ್ಲಿ ಸಿಕ್ಕಿವೆ. ಹರಿಯಾಣದಲ್ಲಿ ಸಿಕ್ಕಿವೆ ಕರ್ನಾಟಕದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಕಾನೂನಿರುವುದರಿಂದ ತೊಂದರೆಯಾಗಿದೆ. ಜಿ.ವಿ.ಕೆ.ರಾವ್ ರಿಪೋರ್ಟ್‌ನಲ್ಲಿ ಅದನ್ನೆ ಹೇಳುತ್ತಾರೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇರುವುದರಿಂದ ಇಷ್ಟು ತೊಂದರೆಯಾಗಿದೆ. ದಳ್ಳಾಳಿಗಳು ಬರುವುದಕ್ಕೆ ಅವಕಾಶವಾಗಿದೆ ಎಂದು ಹೇಳಿದ್ದಾರೆ. ಕಾನೂನಿನಲ್ಲಿ ತೊಡಕಾವ ಗ ಕಾನೂನು ತಿದ್ದುಪಡಿ ಮಾಡುವ ಅವಕಾಶ ಇದೆ. ಕಾನೂನು ತಿದ್ದುಪಡಿ ಈ ಮನೆ ಮುಂದೆ ಬಂದಮೇಲೆ ಜಾರಿ ಆಗುತ್ತದೆ. ಕಾನೂನಿನಲ್ಲಿ ತೊಡಕಿರುವುದರಿಂದ ಸಹಕಾರಿ ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕಾಗಿ ಸರ್ಕಾರ ಅಕ್ವಿಸಿಷನ್ ಮಾಡಬೇಕಾಗುತ್ತದೆ. ಜಿ.ವಿ.ಕೆ. ರಾವ್ ಅವರೂ ಈ ವಿಷಯನ್ನು ಹೇಳಿದ್ದಾರೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಾವಿಷನ್ಸ್‌ನಿಂದ ಇಷ್ಟೆಲ್ಲಾ ಪ್ರಾರಂಭವಾಯಿತು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನು ಈ ಸೊಸೈಟಿಗಳಲ್ಲಿ ಏನಾಗಿದೆ ಎಂಬ ವಿಚಾರ ನೋಡೋಣ. ಸೆಕ್ಷನ್ ೪ರ ಕೆಳಗೆ ನೋಟಿಫಿಕೇಷನ್ ಆದಂಥಾದ್ದು ೭,೪೦೦ ಎಕರೆಗಳು ೪(೧) ಕೆಳಗೆ ನೋಟಿಫಿಕೇಷನ್ ಆದಂಥದ್ದು ೪,೭೫೬ ಎಕರೆಗಳು. Award approved 2,234 acres, possession given 1,933 acres ಇವತ್ತಿನ ವರೆಗೂ ಯಾವ ಯಾವ ಸೊಸೈಟಿಯವರು ಅಕ್ವಿಸಿಷನ್ ಆಗಿದೆ ಎಂಬುದನ್ನು ತಮ್ಮ ಮುಂದೆ ಇಡುತ್ತಿದ್ದೇನೆ ಇದಕ್ಕೆ ಕಾರಣ ಏನು ? ಇಷ್ಟಾದಿಲೇ ಏತಕ್ಕೆ? ೧೯೮೦ರಲ್ಲಿ ೧೦೦ ಸೊಸೈಟಿಗಳನ್ನು ಅಕ್ವಿಸಿಷನ್ ಪುರು ಆಯಿತು, ಇದುವರೆಗೂ ಫೈನಲ್ ಆಗಿಲ್ಲ ಇವುಗಳಿಂದ ಹಣ ಬಿಡುಗಡೆಯಾಗಿದ್ದಾರೆ. ಅದು ಬೇರೆ ವಿಷಯ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇಷ್ಟು ಸೊಸೈಟಿಗಳಿಗೆ ಜಮೀನು ಅಕ್ವೈರ್ ಮಾಡಬೇಕಾದರೆ ಈ ಸೊಸೈಟಿ ಸದಸ್ಯರು ಯಾರು, ಅವರ ಬಗ್ಗೆ ವಿವರ ಏನು ಅವರು ಸದಸ್ಯರೆ ಹೌದೋ ಅಲ್ಲವೋ, ಬೋಗಸ್ ಇದ್ದಾರೆಯೋ ಏನೋ ಎಂಬುದನ್ನೆಲ್ಲಾ ನೋಡಿ ಸರಿಯಾದ ರೀತಿಯಲ್ಲಿ ಪರಿಶೀಲನೆ ಆನಂತರ ಅಕ್ವಿಸಿಷನ್ ಮಾಡಬೇಕು ಎಂಬ ಉದ್ದೇಶಕ್ಕೆ ಬಂದಿದ್ದೇವೆ. ಆದಕ್ಕಾಗಿ ತ್ರೀ ಮ್ಯಾನ್ ಕಮಿಟಿ ಮಾಡಿದ್ದು ಜಿಲ್ಲೆಯಲ್ಲಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಇದ್ದಾರೆ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಇದ್ದಾರೆ. ಕಮಿಟಿ ಮುಂದೆ ಪ್ರತಿಯೊಬ್ಬರೂ ಅಫಿಡವಿಟ್ ಹಾಕಬೇಕೆಂದು ಹೇಳಿದ್ದೇವೆ. ನನ್ನ ಹತ್ತಿರ ಕೆಲವರು ಬಂದರು. ಕೆಲವರು ಬ್ಯಾಂಕ್ ನೌಕರರೂ ಇದ್ದಾರೆ ಇನ್ನೂ ಸೊಸೈಟಿಯನ್ನು ಮಾಡಿಕೊಂಡಿದ್ದಾರೆ. ರಿಸರ್ವ್ ಬ್ಯಾಂಕಿನ ನೌಕರರೂ ಸೊಸೈಟಿಯನ್ನು ಮಾಡಿಕೊಂಡಿದ್ದಾರೆ. ಅವರು ಬೇರೆ ಕಡೆಗೆ ನರ್ಗವಾಗಿ ಹೋಗಿದ್ದಾರೆ. ಅಂತ ಹೇಳಿದರು. ಅದಕ್ಕೆ ನಾನು ಹೇಳಿದೆ ಇಲ್ಲ. ಕಾನೂನು ಪ್ರಕಾರ ಅಫಿಡವಿಟ್ ಕೊಡಿ ಅಂತ ಹೇಳಿದ್ದೇನೆ. ಅದನ್ನು ಕೊಟ್ಟ ಮೇಲೆ ಸಮಿತಿ ಪರಿಶೀಲನೆ ಮಾಡುತ್ತದೆ, ಸದಸ್ಯರು ಎಷ್ಟು ಇದ್ದಾರೆ? ಅವರು ಜಮೀನನ್ನು ಕೊಂಡು ಕೊಳ್ಳುವುದಕ್ಕೆ ಮಾಡಿಕೊಂಡ ಅಗ್ರಿಮೆಂಟ್ ಏನು? ಯಾವ ತಾರೀಖಿನಲ್ಲಿ ಪರ್ಚೇಸ್ ಮಾಡಿದ್ದಾರೆ. ಅದರ ಬೆಲೆ ಎಷ್ಟು ? ೪೦/೫೦ ಅದಿ ಅಳತೆಯುಳ್ಳ ನಿವೇಶನಗಳನ್ನು ಹಂಚಿಕೆ ಮಾಡಬೇಕಾದರೆ ಎಷ್ಟು ಎಕರೆ ಜಮೀನು ಅವರಿಗೆ ಬೇಕು ? ಎನ್ನುವ ಬಗ್ಗೆ

ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸುತ್ತಾರೆ ಎಂದು ಹೇಳಿದೆ. ಸರ್ಕಾರಕ್ಕೆ ಇದಿಷ್ಟೇ ಸಾಲದು ಎಂಬುದಾಗಿ ತಿಳಿದು ಹೈಲೆವಲ್ ಸಮಿತಿಯಿಂದ ಇದು ಸ್ಕ್ರೂಟಿನಿಯೈಸಾಗಬೇಕು ಅಂತ ಮಾಡಿ. ರೆವಿನ್ಯೂ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ಮಾಡಿದ್ದೇವೆ. ಹೈಲೆವಲ್ ಸಮಿತಿ ಪುನಃ ಪರಿಶೀಲನೆ ಮಾಡುತ್ತದೆ. ಇದನ್ನು ಮಾಡಿದ ಉದ್ದೇಶವೇನೆಂದರೆ, ಅನೇಕ ಸದಸ್ಯರು ಓವರ್ ಲ್ಯಾಪಿಂಗ್ ಆಗಿದ್ದಾರೆಂಬುದಾಗಿ ಅನೇಕ ಸದಸ್ಯರ ಬಗ್ಗೆ ಸಂಶಯ ಬಂದಿದ್ದರಿಂದ ಆ ರೀತಿ ಮಾಡಿದ್ದೇವೆ. ಈಗ ಸರ್ಕಾರ ಈ ಎರಡೂ ಸಮಿತಿಗಳು ಏನು ಶಿಫಾರಸ್ಸು ಮಾಡುತ್ತವೆ, ಅದಲ್ಲದೆ ಬೇರೆ ಯಾವುದನ್ನೂ ಸರ್ಕಾರ ಮಾಡಿಲ್ಲ. ಅವರ ಒಂದು ವರದಿಯ ಮೇಲೆ ಎಷ್ಟು ಎಕರೆಯನ್ನು ಕೇಳಿದ್ದಾರೆ, ಯಾವ ಏರಿಯಾದಲ್ಲಿ ಕೇಳಿದ್ದಾರೆ, ಅದರಲ್ಲಿ ಒಂದಕ್ಷರವೂ ಬದಲಾವಣೆ ಮಾಡದ ಹಾಗೆ ಮಾಡಿದ್ದೇವೆ. ನಾನು ಹಿಂದೆ ಕಂದಾಯ ಮಂತ್ರಿಯಾಗಿದ್ದಾಗ ಮತ್ತೊಂದು ಆರ್ಡರ್ ಮಾಡಿದ್ದೇನೆ. ಅದೇನೆಂದರೆ ಪಾರ್ಕ್, ಆಟದ ಮೈದಾನ ಸಾರ್ವಜನಿಕ ಉಪಯೋಗಕ್ಕಾಗಿ ಏನು ಬೇಕಾದ ಜಾಗ ಇದೆ, ಅದನ್ನು ಬಿಟ್ಟು ಉಳಿದ ಜಾಗವನ್ನು ಅಕ್ವೈರ್ ಮಾಡಬೇಕೆಂದು ಆರ್ಡರ್ ಮಾಡಿದ್ದೇನೆ. ಅದನ್ನು ಡಿಲೀಟ್ ಮಾಡಬೇಕೆಂದು ಮಾಡಿದ್ದೇನೆ. ಡಿಲೀಟ್ ಆಗಿಯೇ ನೋಟಿಫೈ ಮಾಡಲಾಗಿದೆ. Such of the areas which are reserved for public purposes though they have been provided with land. ನಮ್ಮ ಮಾಸ್ಟರ್ ಪ್ಲಾನ್ ಅಂದರೆ ಟೌನ್ ಪ್ಲಾನ್‌ನಲ್ಲಿ ಬರುತ್ತದೆ. ಅದರ ನಂತರ ಪ್ರಪೋಸಲ್ ಬಂತು. ಹೈಲೆವಲ್ ಸಮಿತಿಯ ಮುಂದೆ ಬಂದಾಗ including park and playground ಸೇರಿಸಿ ನೋಟಿಫೈ ಮಾಡಿ. ಆದರೆ ಆ ಜಾಗವನ್ನು ಅದಕ್ಕಾಗಿಯೇ ಬಿಡಲಾಗುವುದೆಂದರು. ಅದಕ್ಕೆ I said nothing doing. ಇದಕ್ಕೆ ಕಾರಣವೇನೆಂದರೆ, ೨ ಹಂತದಲ್ಲಿ ಸಮಿತಿಗಳನ್ನು ಮಾಡಿರತಕ್ಕ ಉದ್ದೇಶ ಸರ್ಕಾರದ್ದು ಸ್ಪಷ್ಟವಾಗಿದೆ. ಅಂದರೆ ಬೋಗಸ್ ಸದಸ್ಯರು ಯಾರು ಇದ್ದಾರೆ ಅವರು ಹೋಗಬೇಕು. ಬೋಗಸ್ ಆಗ್ರಿಮೆಂಟ್ ಆಗಿದ್ದರೆ ಅದು ಹೋಗಬೇಕು. There is a method and we have entrusted to the Registrar of co-operative societies. There are other officers also. ಬೇರೆ ಅಧಿಕಾರಿಗಳೂ ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಆದರ ಫಲಿತಾಂಶ ಏನು ? ನಾನು ಹೇಳಿದ್ದಕ್ಕೆ ಬನ್ನಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮದು-ನಿಮ್ಮದು, ಅದಕ್ಕೆ ಆಮೇಲೆ ಬರೋಣ. ಹಿಂದಿನ ಸರಕಾರದವರು ೩ ಜನರ ಸಮಿತಿ ಇಲ್ಲದೆ, ವಿಚಾರಣೆ ಇಲ್ಲದೆ, ಪರಿಶೀಲನೆ ಇಲ್ಲದೆ ನೋಟಿಫೈ ಮಾಡಿದ್ದಾರೆ. ಆದರೆ ಈ ಸರ್ಕಾರ ಈ ಬಗ್ಗೆ ಪರಿಶೀಲನೆ ಮಾಡಲು ಸಮಿತಿಯನ್ನು ಮಾಡಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಮೊದಲು ಸರ್ಕಾರ ಏನು ಮಾಡಿತ್ತು. ಅದನ್ನೇ ನೀವೂ ಮಾಡಬೇಕು ಅಂತ ಇದ್ದೀರಾ?

ಶ್ರೀ ಬಿ. ಡಿ. ಬಸವರಾಜ್.—ನೇಣನ್ನು ಹಾಕುವುದಕ್ಕೆ ನಿಮ್ಮ ಅಡ್ರಸ್ ಬೇಕಲ್ಲ. ಅದಕ್ಕಾಗಿಯೇ ಹೇಳುತ್ತಿರುವುದು.

ಶ್ರೀ ಎಂ. ವೀರಪ್ಪಮೊಯ್ಲಿ.—ಹಿಂದಿನ ಸರ್ಕಾರ ಮಾಡಿದ ನೋಟಿಫಿಕೇಷನ್ ಬಗ್ಗೆ ವೈಟ್ ಪೇಪರನ್ನು ಈ ಸದನದಲ್ಲಿ ತರಲಾಗಿದೆ. ಇನ್ನೂ ಬೇರೆ ಬೇರೆ ತಪ್ಪು ಮಾಡಿದ್ದರೆ, ಅದರ ಬಗ್ಗೆಯೂ ವೈಟ್ ಪೇಪರ್ ತನ್ನಿ. ನೋಡೋಣ. ಅದನ್ನು ಬಿಟ್ಟು ಜನರಲ್ಲಾಗಿ ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಿ. ಡಿ. ಎ. ಯಿಂದ ೨೭೯ ಎಕರೆ ಜಮೀನನ್ನು ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಕೊಟ್ಟಿದ್ದಾರಲ್ಲಾ ಅದು ತಪ್ಪು ಅಂತ ಹೇಳುತ್ತಿಲ್ಲ. ಮುಖ್ಯಮಂತ್ರಿಗಳು, ಪರಂತ್ರಿಗಳು ಹಾಗೂ ಅಧಿಕಾರಿಗಳಿಗೆ ಮನವರಿಕೆಯಾದ ಮೇಲೆಯೇ ಮಾಡಿದ್ದಾರೆ ಅಂತ ಹೇಳಿದ್ದೇನೆ. I never questioned that. ಹಿಂದಿನದ್ದಕ್ಕಿಂತಲೂ ಸ್ವಲ್ಪ ಉತ್ತಮಗೊಳಿಸೋಣ ಎನ್ನುವ ದೃಷ್ಟಿಯಿಂದ ಆದಕ್ಕೆ ಒಂದು ಸಮಿತಿಯನ್ನು ಮಾಡೋಣ ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. Notifications are issued only on the recommendation of the Revenue Commissioner and HUD Commissioner.

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಮಾಡುತ್ತಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೆವಿನ್ಯೂ ಕಮಿಷನರ್ ಹಾಗೂ ಎಚ್. ಯು. ಡಿ. ಕಮಿಷನರ್ ಬಗ್ಗೆ ಆ ಮಾತನ್ನು ತಾವು ಬಳಸಿದರೆ ಕಷ್ಟವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ನಿರಪರಾಧಿಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ನಮ್ಮಲ್ಲಿ ದಕ್ಷ ಅಧಿಕಾರಿಗಳೂ ಇದ್ದಾರೆ.

ನಾನು ಬೆಳಿಗ್ಗೆ ಕೂಡಾ ಹೇಳಿದೆ. ಏನೆಂದರೆ, ಇಪತ್ತೈದಿವಸ ರೆವಿನ್ಯೂ ಡಿಪಾರ್ಟ್‌ಮೆಂಟಿನ ಒಬ್ಬ ಕ್ಲಾಸ್–೪ ತಪ್ಪು ಮಾಡಿದರೂ, I have to own it. ಅದೇ ರೀತಿ ಜಿಲ್ಲೆಗೆ ರಾವ್ ಇರಬಹುದು ಅಥವಾ ರಿಜಿಸ್ಟ್ರಾರ್ ಇರಬಹುದು. ಒಳ್ಳೆಯ ಕೆಲಸ ಮಾಡಿದರೆ that credit goes to the Government and not to the Officer. Credit or discredit of any Government Officer, will go to Government. ತಪ್ಪು ಮಾಡಿದವರ ಮೇಲೆ ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳಬೇಕು ಇದ್ದರೆ ಅದು ಸರ್ಕಾರದ ತಪ್ಪು ಆಗುತ್ತದೆ. ನೀವು ಹೇಳಿದ ಎಲ್ಲಾ ವಿಷಯಗಳಿಗೂ ನಾನು ಉತ್ತರ ಕೊಡುತ್ತೇನೆ. ಆ ಮೇಲೆ ಪುನಃ ನನ್ನ ಗಮನಕ್ಕೆ ಬಂತು. ಏನು ? ಲ್ಯಾಂಡ್ ಅಕ್ವಿಸಿಷನ್ ಹಣ ಕೊಟ್ಟಿದೇ ಇಲ್ಲ. ಫೋರ್ ಮನ್ ನೋಟಿಫಿಕೇಷನ್ ಆಗುವುದಕ್ಕಿಂತಾ ಮೊದಲು ೫೫ ಪರ್ಸೆಂಟ್ ಕಾನ್ಸ್ ಆಫ್ ಅಕ್ವಿಸಿಷನ್ ಕೊಡಬೇಕು. ಸೆಕ್ಷನ್ ೬ ಕ್ಕಿಂತ ಮೊದಲು ಪೂರ್ಣ ಹಣ ಕೊಡಬೇಕೆಂದು ಮಾಡಿದ್ದೇವೆ ಆಮೇಲೆ ಮಾಡಿದರೆ ಅದು ಹೆಚ್ಚಾಗಿ ಆಗುತ್ತದೆ. ಇದಕ್ಕೆಂತಲೂ ಮೊದಲೇ ಹಣ ಸಂಪೂರ್ಣ ಕೊಡುವ ಹಾಗೆ ಆಜ್ಞೆ ಮಾಡಿದ್ದೇವೆ. ಇದಕ್ಕಿಂತಲೂ ಹೆಚ್ಚಾಗಿ ಆಲ್ಲಿ ಬೋಗಸ್ ಸದಸ್ಯರಿದ್ದಾರೆ ತೆಗೆಯಬೇಕು ಎನ್ನುವ ವಿಚಾರದಲ್ಲಿ ಇನ್ನೊಂದು ಆಜ್ಞೆಯನ್ನು ಮಾಡಿದ್ದೇವೆ. ಎಂದರೆ ಈ ಸೊಸೈಟಿಗಳಿಗೆ ಜಮೀನಿನ ಪೊಸಿಷನ್ ಕೊಡುವುದಕ್ಕಿಂತಾ ಮೊದಲು ಪ್ರತಿಯೊಬ್ಬ ಸಂಘ ಸಂಸ್ಥೆಯ ಸದಸ್ಯರು ಸರ್ಕಾರಕ್ಕೆ ಅಗ್ರಿಮೆಂಟ್ ಕೊಡಬೇಕು. ಈ ವಿಚಾರದಲ್ಲಿ ನಾನು ಸಭೆ ಮಾಡಿದೆ. ೪–೬ ಸೊಸೈಟಿಗಳಿಗೆ ಮೊದಲೇ ಪೊಸಿಷನ್ ಕೊಟ್ಟಿಬಿಟ್ಟಿದ್ದಾರೆಂದು ಸಭೆ ಮಾಡಿದಮೇಲೆ ನನಗೆ ಗೊತ್ತಾಯಿತು. ನಾನು ಅದಕ್ಕೂ ಆಜ್ಞೆ ಮಾಡಿದೆ. the BDA should not proceed with further work unless individual member of the Society gives an agreement. This is how the Government has acted to prevent these mal-practices. ಇದು ಒಂದು ಡಿಸಿಷನ್ ತೆಗೆದುಕೊಂಡಿದ್ದೇನೆ. ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಇಷ್ಟೆಲ್ಲಾ ಆದ ಮೇಲೆ ಆಜ್ಞೆ ಮಾಡಿದ್ದೇವೆ. The Societies after taking the possessions, will have to apply to the BDA. ಆಪರ ನಿಯಮಾವಳಿ ಪ್ರಕಾರ ಪ್ಲಾನ್ ತಯಾರು ಮಾಡಿ, ಬಿಡಿಎ ಲೇಔಟ್ ಅಪ್ರೂವ್ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ತೆಗೆದುಕೊಂಡಮೇಲೆ ಅವರು ಅವಶ್ಯಕ ಇರತಕ್ಕ ಅಭಿವೃದ್ಧಿ ಕಾರ್ಯಗಳಿಗೆ ಹಣ ತುಂಬಬೇಕು. ಕುಡಿಯುವ ನೀರು, ರಸ್ತೆ, ಪಾರ್ಕ್ ಇವೆಲ್ಲಾ ಆಗುವುದಕ್ಕೆ ಡೆವಲಪ್‌ಮೆಂಟ್ ಛಾರ್ಜಸ್ ಕಟ್ಟಬೇಕು. ಆ ಅಭಿವೃದ್ಧಿ ಕಾರ್ಯಗಳೆಲ್ಲಾ ಆದಮೇಲೆ ಆ ಸೈಟುಗಳನ್ನು ಹಂಚತಕ್ಕ ಬಗ್ಗೆ ಪುನಃ the BDA will have to approve it. It is not so simple as if. ಸೊಸೈಟಿಯನ್ನು ಯಾರೂ ತೆಗೆದುಕೊಂಡು ಹೋಗುವುದಕ್ಕಾಗಿ ವುದಿಲ್ಲ. ಇದೆಲ್ಲಾ ಮಾಡುವುದಕ್ಕೆ ಕಾರಣ ಏನು ? The intention of the Government is that the bonafide member of the Societies must get the site. I would like to view this as a human problem. People have paid the money and people wants the sites and it is the duty of the Government to help such people i.e., needy people. ಇಷ್ಟೆಲ್ಲಾ ಮುಂಜಾಗ್ರತೆ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ. ಇದರಲ್ಲಿ ಸರ್ಕಾರದ ಉದ್ದೇಶ ಇವತ್ತು ಈ ಸದಸ್ಯರಿಗೆ ಸರಿಯಾದ ಒಂದು ಸೈಟ್ ಸಿಗಬೇಕು, ಅದೂ ಕೂಡಾ ಕಡಿಮೆ ಬೆಲೆಯಲ್ಲಿ ಸಿಗಬೇಕು ಎಂಬುದೇ ಆಗಿದೆ. ಮಾನ್ಯ ಅಧ್ಯಕ್ಷರೆ, ಬಿ.ಡಿ.ಎ. ಸೈಟಿಗೆ ಅಂದರೆ ೬೦–೪೦ ಅಳತೆಯುಳ್ಳ ಸೈಟಿಗೆ ಮಾರುಕಟ್ಟೆ ಬೆಲೆ ೨ ಲಕ್ಷ ರೂಪಾಯಿಗಳವರೆಗೆ ಇಲ್ಲಿ ಈ ಸೊಸೈಟಿಗಳು ಸರಿಯಾಗಿ ಕೆಲಸ ಮಾಡಿದರೆ, ೨೫ ರಿಂದ ೫೦ ಸಾವಿರದ ಒಳಗೆ ಜನತೆಗೆ ಸೈಟನ್ನು ಕೊಡಬಹುದು. ಇದರಲ್ಲಿ ಎಷ್ಟು ಅಂತರ ಇದೆ ಎಂಬುದನ್ನು ತಾವು ಗಮನಿಸಬೇಕು. ಸರ್ಕಾರದ ಸಂಸ್ಥೆಯ ಮುಖಾಂತರ ಮಾಡಿದರೆ ಎಷ್ಟಾಗುತ್ತದೆ ಅದೇ ಖಾಸಗಿ ಸಹಕಾರ ಸಂಘಗಳು ನಿಷ್ಠೆಯಿಂದ ಕೆಲಸ ಮಾಡಿದರೆ ಎಷ್ಟು ಹಣಕ್ಕೆ ಸೈಟನ್ನು ಒದಗಿಸಬಹುದು ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಆದರೆ ಈ ಅನುಕೂಲ ಈಗ ಸಿಗುತ್ತಿಲ್ಲ. ಎಲ್ಲ ಸಂಸ್ಥೆಗಳಲ್ಲೂ ಹೀಗೆ ಇದೆ ಎಂದು ನಾನು ಹೇಳುವುದಿಲ್ಲ. ಮಾನ್ಯ ಕೃಷ್ಣನ್ ಅವರು ಹೇಳಿದರು in Employees Societies, they are vigilant. ನಮ್ಮ ಶಾಸಕರ ಸಹಕಾರ ಸಂಘದ ವ್ಯವಹಾರವನ್ನು ಕ್ಲಿಯರ್ ಮಾಡಲು ಎರಡು ವರ್ಷ ತೆಗೆದುಕೊಂಡಿತು. ಅದೆಲ್ಲಾ ತಮಗೆ ಗೊತ್ತಿದೆ. ಈ ಸೊಸೈಟಿಗಳ ವ್ಯವಹಾರದಲ್ಲಿ ಸರ್ಕಾರ ಮೊದಲು ಬಿಗಿಯಾದ ಕ್ರಮವನ್ನು ತೆಗೆದುಕೊಂಡಿತು, ಆ ಮೇಲೆ ಬರುತ್ತಾ ಬರುತ್ತಾ, ಸಡಿಲವಾಗಿದೆ ಆನ್ನತಕ್ಕ ಮಾತನ್ನು ಮಾನ್ಯ ಗೌಡರು, ಹಾಗೂ ಶ್ರೀ ಮೊಯಿಲಿಯವರು ಹೇಳಿದರು. ಸರ್ಕಾರದ

ನೋಟೀಫಿಕೇಷನ್‌ಗಳನ್ನು ಓದಿ ಹೇಳಿದರು. This is a Government distorting the law, ಜನಕ್ಕೆ ಮೋಸ ಮಾಡಿದ್ದಾರೆ. ಹಾಗೂ ಇನ್ನೂ ಏನೇನೂ ಪದಗಳನ್ನು ಉಪಯೋಗಿಸಿದರು. ಆ ಶಬ್ದಗಳು ನನಗೆ ಬರುವುದಿಲ್ಲ. ಆ ಶಬ್ದಗಳ ಸಂಗ್ರಹ. ಆ ಚುರುಕಾದ ಭಾಷೆ ನನಗೆ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ಕಡೆ ಇದ್ದಾಗ ನಿಮಗೆ ಬರುತ್ತಿತ್ತು.

ಶ್ರೀ ಎಸ್.ಆರ್. ಬೊವ್ಮಾಯಿ.—ನನ್ನ ಗೆಳೆಯ ದೇವೇಗೌಡರು, ಬಹಳ ಅನುಭವಿಗಳು. ಅವರಿಗೆ ಇರತಕ್ಕ ಆಡಳಿತದ ಅನುಭವ ನನಗಂತೂ ಇಲ್ಲ. ಅವರೂ ಕೂಡ ಈ ನೋಟೀಫಿಕೇಷನನ್ನು ಓದಿ ಓದಿ, ಆದರಲ್ಲಿರುವ ಶಬ್ದಗಳನ್ನು ವಿಂಗಡಿಸಿ ಓದಿ ಓದಿ ಈ ಸರ್ಕಾರ ದಾರಿ ತಪ್ಪಿದೆ ಅನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಗ್ರೀನ್‌ಬೆಲ್ಟ್ ಏರಿಯಾ ವಿಚಾರದಲ್ಲಿ ಒಂದು ತಿದ್ದುಪಡಿಯನ್ನು ಸರ್ಕಾರ ಮಾಡಿದೆ. ಆದು ಸೆಕ್ಷನ್ ೯೫ಕ್ಕೆ ತಿದ್ದುಪಡಿ ಮಾಡಿದ ಮೇಲೆ ಈ ಗ್ರೀನ್ ಬೆಲ್ಟ್ ವಿಚಾರದಲ್ಲಿ ಅವ್ಯವಹಾರ ನಡೆದಿದೆ ಹಾಗೂ ಈ ಬಗ್ಗೆ ಸರ್ಕಾರ ಎಷ್ಟು ಸಡಿಲವಾಗಿದೆ ಎನ್ನುವುದನ್ನು ಸಾಕಷ್ಟು ಹೇಳಿದ್ದಾರೆ. ನಾನು ಈ ಸೆಕ್ಷನ್ ಏನು ಇದೆ ಎಂಬುದನ್ನು ಹೇಳುತ್ತೇನೆ. (Amendment to Section 95 (3):-

> "The State Government may, with a view to protecting and improving the environment, by notification, declare as green belt any area lying within the limits or within the prescribed distance from the limits of the City under Karnatakr Municipal Corporation Act of 1976, the Karnataka Act of 1977, of the City Municipality, Town Municipality and Notified areas constituted or deemed to have constituted under Karnataka Municipal Act and different distances may be prescribed for each such City Municipality, Town Municipalities or notified area...
>
> Notwithstanding anything contained in this Section, no permission shall be granted to divert any land or part therefor assessed or held for the purpose of agriculture lying within the limits of green belt to any other purpose."

ಗ್ರೀನ್‌ಬೆಲ್ಟ್ ಏರಿಯಾ ಅಂದರೆ ಅಗ್ರಿಕಲ್ಚರಲ್ ಪರ್‌ಪಸ್‌ಗೆ ಎಂದು ಮೀಸಲಾಗಿರುವುದನ್ನು ಕಾನೂನು ಪ್ರಕಾರ ನೋಟಿಫೈ ಆದರೆ ಇಲ್ಲಿ ನಾನ್ ಅಗ್ರಿಕಲ್ಚರಲ್ ಪರ್‌ಪಸ್‌ಗೆ ಕೊಡಕೂಡದು. ಇಲ್ಲಿ ಎರಡು ವಿಚಾರಗಳನ್ನು ಮಾತ್ರ ಸದಸ್ಯರು ತಿಳಿದುಕೊಳ್ಳಬೇಕು, ಟೌನ್ ಪ್ಲಾನಿಂಗ್ ಆಕ್ಟ್ ಕೆಳಗೆ ಗ್ರೀನ್ ಬೆಲ್ಟ್ ಏರಿಯಾವನ್ನು ಡಿಕ್ಲೇರ್ ಮಾಡಂವುದು ಒಂದು ಕಡೆ ಇದೆ, ಲ್ಯಾಂಡ್ ರೆವಿನ್ಯೂ ಆಕ್ಟ್ ಕೆಳಗೆ ಮಾಡತಕ್ಕದ್ದು ಇನ್ನೊಂದು ಕಡೆ ಇದೆ. ಈ ಕಾನೂನು ಜಾರಿಗೆ ಬಂದ ಮೇಲೆ ಒಂದು ನೋಟಿಫಿಕೇಷನ್ ಆಗಿದೆ, ನಾನು ಅದರಲ್ಲಿನ ಕೆಲವು ಭಾಗಗಳನ್ನು ಓದುತ್ತೇನೆ. (April 1984)-

> "It shall come into force at once. The State Government may, with a view to protecting and improving the environment, by notification, declare as green belt any area lying within the limits or within the prescribed distance from the limits of the City under the Karnataka Municipal Corporation Act of 1976, of the City Municipality, Town Municipality and notified areas constituted or deemed to have been constituted under Karnataka Municipality Act 1964 and different distances may be prescribed for each such City Municipality, Town Municipality or notified area."

ನೋಟಿಫಿಕೇಶನ್ ಆದಮೇಲೆ ಏರಿಯಾ ಡಿಫೈನ್ ಮಾಡತಕ್ಕ ಅಧಿಕಾರ ಬಂತು. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಆಮೇಲೆ ಬರುತ್ತೇನೆ. ಈ ಆರ್ಡರ್ ಎಲ್ಲಾ ಕಡೆ ಅಪ್ಲೈ ಆಗಬೇಕೆಂದು

ಹೇಳಿದ ಮೇಲೆ ಇದು ಎಲ್ಲಾ ಕಡೆಗೂ ಅಂದರೆ ಅದು ಮಂಗಳೂರು ಇರಬಹುದು ಮೈಸೂರು ಇರಬಹುದು, ಹುಬ್ಬಳ್ಳಿ ಧಾರವಾಡ ಇರಬಹುದು, ಕನ್ಫರ್ಟ್ ಮಾಡತಕ್ಕದ್ದನ್ನು ಎಲ್ಲಾ ಜಿಲ್ಲಾಧಿಕಾರಿಗಳು ನಿಲ್ಲಿಸಿದರು Not a single land could be converted into non-agricultural land to build houses. ನಾನು ಹೋದಲ್ಲೆಲ್ಲ ರೆಪ್ರಸೆಂಟೆ ಷನ್ ಮಾಡಿದರು. ಅವರು ರೆಫರ್ ಮಾಡಿದಂತಹ ಆರ್ಡರ್ pertains to this Section. ಈಗ ಅದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಬೇರೆ ಬೇರೆ ಇಲಾಖೆಗಳ ಅಭಿಪ್ರಾಯ ಪನ್ನು ನಾನು ಪಡೆದುಕೊಂಡಿದ್ದೇನೆ. ಕಾನೂನು ಇಲಾಖೆಯ ಅಭಿಪ್ರಾಯ ಸ್ಪಷ್ಟವಾಗಿ ಬಂತು. Their opinion is, unless a specific and clear notification is issued declaring each survey number you can not prevent conversion of land from Agriculture to non-agriculture" ಎಂದು. ಈಗ ಬೆಂಗಳೂರಿನ ವಿಚಾರದಲ್ಲಿ ಹೇಳುತ್ತಿದೆ. ಗ್ರೀನ್‌ಬೆಲ್ಟ್ ಏರಿಯಾ ಎಂದು ನಾನು ನೋಟಿಫೈರ್ ಮಾಡಿದ್ದೆವಲ್ಲ, ಅದು ಕಂಟ್ರಿ ಟೌನ್ ಪ್ಲಾನಿಂಗ್ ಆಕ್ಟ್ ಪ್ರಕಾರ ಅದು ಬದಲಾವಣೆ ಯಾಗಿಲ್ಲ. What has been declared as green belt under the Country and Town Planning Act we have not relaxed. But we wanted to extend it to the entire State. That was the purpose for amending Section 95. Revenue Department and Law Department together had a Joint meeting and after that this clarification is issued. Unless and until a notification under Section 95 is issued declaring the area and specifying the survey number and boundaries in the eye of law there is no green belt There is no green belt until a notification is issued ಕಾನೂನು ದೃಷ್ಟಿಯಲ್ಲಿ ಗ್ರೀನ್‌ಬೆಲ್ಟ್ ಏರಿಯಾ ಇಲ್ಲವೆಂದು ಕಾನೂನು ಇಲಾಖೆಯ ಅಭಿಪ್ರಾಯವಾಗಿದೆ. This is also a correct view, So. this clarification is issued.

SRI B. BASAVALINGAPPA.—What was the original green belt and what is the new green belt.

SRI S. R. BOMMAI.—I am explaining. There is no green belt area in other towns. Bangalore green belt is under Country and Town Planning Act. It is not changed, ಅದರಲ್ಲಿ ಬದಲಾವಣೆ ಇಲ್ಲ. ಬದಲಾವಣೆ ಮಾಡತಕ್ಕ ಸೂಚನೆ ಇದೆ. There is a proposal to change the area. I am coming to that. So far as the green belt around Bangalore is concerned it is not changed at all. ಈ ಸೊಸೈಟಿಗಳಿಗೆ ಕೊಟ್ಟಿರುವ ಜಮೀನಿನಲ್ಲಿ ಗ್ರೀನ್‌ಬೆಲ್ಟ್ ಇದೆ. ಕೆಲವು ಸೊಸೈಟಿಗಳಿಗೆ ಏನು ಲ್ಯಾಂಡ್ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಇವೆ, Their lands come under the green belt. ಆದರೆ ಆ ಸೊಸೈಟಿಗಳಲ್ಲಿರುವ ಗ್ರೀನ್‌ಬೆಲ್ಟ್ ಏರಿಯಾದಲ್ಲಿ ಬರುತ್ತದೆ. But we have stopped further proceedings.

SRI M. S. KRISHNAN. - In respect of green belt my own little experience is that during 1983 number of housing societies viz HAL NGEF and some other two or three societies approached the then Chief Minister and requested for clearance and they got it cleared by extending the green belt and new green belt was formed. In 1983. there was a green belt.

ಶ್ರೀ ಎಸ್. ಆರ್. ಬೊಮ್ಮಾಯಿ,—ಈ ಗ್ರೀನ್‌ಬೆಲ್ಟ್ ಏರಿಯಾ-ಏಳರಲ್ಲಿ ಚೇಂಜ್ ಆಗಿದೆ ಚೇಂಜ್ ಆಗಿಲ್ಲ. ಅಂತ ಹೇಳಿಲ್ಲ. ೧೯ಏಳರಲ್ಲಿ ಗ್ರೀನ್‌ಬೆಲ್ಟ್ ಅಂತ ಏನು ನೋಟಿಫೈರ್ ಆಗಿದೆ ಆಮೇಲೆ ಏನೂ ಚೇಂಜ್ ಆಗಿಲ್ಲ. ನಮ್ಮ ಸರ್ಕಾರ ಬಂದಮೇಲೆ ಗ್ರೀನ್‌ಬೆಲ್ಟನ್ನು ಎಕ್ಸ್‌ಟೆಂಡ್ ಮಾಡಿದ್ದೇವೆ. ಆದರಲ್ಲಿ ಬದಲಾವಣೆ ಆಗಿಲ್ಲ. That is under the Country and Town Planning Act, ಆದರಲ್ಲಿ ಏನೂ ಇಲ್ಲ, ಈ ನೋಟಿಫಿಕೇಶನ್ ಏನಿದೆ We wanted to extend the green belt idea to other towns also ಅದಕ್ಕಾಗಿ

this clarification was issued. As long as no subsequent notification declaring the green belt a definite area, is specified and issued there will not be any green belt. ಇದು ಕಾನೂನು ಇಂಟರ್‌ಪ್ರಿಟೇಶನ್ ಅಲ್ಲವೆಂದು ನಾನು ಶ್ರೀ ದೆ ವೇಗೌಡರಿಗೆ ಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—೯ ಎಕರೆಯಲ್ಲಿ ಸುಮಾರು ಎರಡೂವರೆ ಮೂರು ಸಾವಿರ ಎಕರೆ ಯಷ್ಟು ಜಾಗವನ್ನು ಗ್ರೀನ್‌ಬೆಲ್ಟ್ ಏರಿಯಾದಲ್ಲಿ ಅಕ್ವೈರ್ ಮಾಡಿದ್ದೀರಿ ಅಂತ ಇದರಲ್ಲಿ ಇದೆ

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಲ್ಲ ಅಂತ ಹೇಳುವುದಿಲ್ಲ. ಗ್ರೀನ್ ಬೆಲ್ಟ್‌ನಲ್ಲಿ ಇರತಕ್ಕಂಥ ಸುಮಾರು ಎರಡೂವರೆ ಸಾವಿರ ಎಕರೆಯಲ್ಲಿ ಬಿ. ಇ. ಎಲ್. ಕೈಗಾರಿಕಾ ಸಂಸ್ಥೆ ಇದೆ, ಎಂಪ್ಲಾಯೀಸ್ ಸೊಸೈಟಿಗಳಿಗೆ ಹಂಚಿಕೆಯಾಗಿದೆ. ಯಾರೇ ಇರಲಿ but we have not finalised it. We have stopped. ಸೆಕ್ಷನ್ ೬ರ ಪ್ರಕಾರ ನೋಟಿಫಿಕೇಷನ್ ಆಗಿಲ್ಲ. ಸೆಕ್ಷನ್ ೪ರ ಪ್ರಕಾರ ನೋಟಿಫಿಕೇಷನ್ ಆಗಿದೆ. ಅಲ್ಲಿಗೆ ನಿಲ್ಲಿಸಿಬಿಟ್ಟಿದ್ದೇವೆ. They are pending for the last two years.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ಡಿ. ದೇವೇಗೌಡ.—ನಾನು ತಮ್ಮ ಹಾಗೆ ಮತ್ತು ಶ್ರೀ ವೀರಪ್ಪ ಮೊಯಿಲಿಯವರ ಹಾಗೆ ಕಾನೂನುತಜ್ಞ ಅಲ್ಲ. ಇದನ್ನು ಮೊದಲೇ ಹೇಳಿಬಿಡುತ್ತೇನೆ. Interpretation of law ನನಗೆ ಗೊತ್ತಿಲ್ಲ. ಏಕೆಂದರೆ ನೀವು ಮಂತ್ರಿಗಳಾಗಿದ್ದಾಗ, ಬಹುಶಃ ಆಗ ನೀವು ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. Circular No. RD 100 AQB 83 ಈ ನೋಟಿಫಿಕೇಶನ್‌ನಲ್ಲಿ ಬೆಂಗಳೂರು ಮತ್ತು ಹೊರ ಜಿಲ್ಲೆಗಳಿಗೆ ಹೊರ ನಗರಗಳಿಗೆ ಎಂದು ಹೇಳಿದ್ದೀರಾ ? ನಾನು ತಪ್ಪಾಗಿ ಓದಿದ್ದರೆ ತಿದ್ದಿಕೊಳ್ಳುತ್ತೇನೆ. ತಮ್ಮ ಕ್ಷಮೆ ಕೋರುತ್ತೇನೆ. ಸರ್ಕಾರದ ವಿರುದ್ಧವಾಗಿ, ಅನಾವಶ್ಯಕವಾಗಿ ನಾನು ಹೋಗಿನನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಅಂತಲ್ಲ. ಇದರೊಳಗೆ ಬೆಂಗಳೂರು ಹೊರತು ಬೇರೆ ಅಂತ ಹೇಳಿ ಎಲ್ಲಿಯಾದರೂ ಇದೆಯೇ ಇದರಲ್ಲಿ ? ಬೆಂಗಳೂರು ನಗರಕ್ಕೆ ಹೊರತಾಗಿ ಬೇರೆ ನಗರಗಳಿಗೆ ಈ ಒಂದು ಆರ್ಡರ್ ಅನ್ವಯವಾಗುತ್ತದೆ ಎನ್ನತಕ್ಕಂಥಾದ್ದು ಇದ್ದರೆ ನಾನು ಬೆಳಿಗ್ಗೆ ಏನು ಸದನದಲ್ಲಿ ಹೇಳಿದ್ದೇನೆ. relaxation etc. ಅದನ್ನು Motive attribute ಮಾಡಿಲ್ಲದಕ್ಕೆ ಹೋಗಿಲ್ಲ. I have only quoted. ಇದರೊಳಗೆ ಬೆಂಗಳೂರು ನಗರ ಹೊರತಾಗಿ ಅನ್ವಯವಾಗುವುದಿಲ್ಲ ಹೊರತು ಬೇರೆ ನಗರಗಳಿಗೆ ಅನ್ವಯವಾಗುತ್ತದೆ ಎಂದು ಹೇಳಬೇಕಾಗಿದ್ದರೆ ಅದು ಒಂದೂ ಹೇಳಿಲ್ಲ. ಇನ್ನೊಂದು ಸಾರಿ ಬೇಕಾದರೆ ಇದನ್ನು ಓದೋಣ. ಲಾಯರುಗಳ ಜೊತೆ ಬೇಕಾದರೆ ತಾವು ಚರ್ಚೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ...

(ಗೊಂದಲ)

ಅಧ್ಯಕ್ಷರು.—ಗೌಡರೇ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಅನಾವಶ್ಯಕವಾಗಿ ಕಾಲ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಒಂದು ತಾಸು ಭಾಷಣ ಮಾಡಿದ್ದೀರಿ ಅವರು ಉತ್ತರ ಕೊಡುತ್ತಿದ್ದಾರೆ. ಅವರ ಉತ್ತರ ಕೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಈಸ್ಡ್ ಆಗಿದ್ದಾರೆ...

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುತ್ತೇನೆ, ಮೊದಲು ಕುಳಿತುಕೊಳ್ಳಿ ಆಮೇಲೆ ಸಾವಕಾಶ ಅವಕಾಶ ಕೊಡುತ್ತೇನೆ. ನೀವು ಕೂಡ ಹಿಂದೆ ಮಂತ್ರಿಗಳಾಗಿದ್ದವರು ಆವರು ಹೇಳುವುದನ್ನು ಮೊದಲು ಕೇಳಿ.

6-00 P M.

ಶ್ರೀ ಹೆಚ್. ಡಿ. ದೇವೇಗೌಡ.— ಅಧಿಕಾರಿಗಳಿಂದ ಸರಿಯಾದ ವರದಿಯನ್ನು ತರಿಸಿಕೊಳ್ಳಿಎಂದು ತಾವು ಸರ್ಕಾರಕ್ಕೆ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಳಿಗ ಸೊಸೈಟಿಗಳು ಇದೆಯಲ್ಲ. ಬಿ-ಟಿ-ಎಸ್‌ರ ಪ್ರೊಸೀಡಿಂಗ್ಸ್‌ನಲ್ಲಿ ತಾವು ಕೊಟ್ಟ ಅಂಕಿಅಂಶಗಳು ಏನಿವೆ, ಎಷ್ಟು ಎಕರೆ

ಆಕ್ಷೆಪರ್ ಮಾಡಿದೆ, ೪–೧ ನೋಟಿಫಿಕೇಷನ್ ಆಗಿದೆ, ಇವುಗಳಲ್ಲಿ ಸ್ವಲ್ಪ ವ್ಯತ್ಯಾಸ ಹೆಚ್ಚಾಗಿದೆ ಎಂದು ಕಾಣುತ್ತದೆ.

> "The Secretary to Housing and Urban Development clarified to the Deputy Commissioner, Bangalore District that roughly about 9000 acres of land has been acquired for the purpose of various House Building Co-operative Societies.

ಮುಖ್ಯ ಮಂತ್ರಿಗಳು ೪೫ ಸೊಸೈಟಿಗಳು ಗ್ರೀನ್ ಬೆಲ್ಟ್ ವಿರಿಯಾದಲ್ಲಿ ಬರುತ್ತದೆಯಾದ ಕಾರಣ ಜಮೀನು ಕೊಡಬಾರದು ಎಂದು ಹಿಂದೆ ನಿರ್ಣಯ ಮಾಡಿದ್ದರೂ ಕೊಡಲಾಗಿದೆ. ಎಷ್ಟು ಎಕರೆ ಸ್ವಾಧೀನಕ್ಕೆ ಕೊಟ್ಟಿದ್ದೀರಿ ಎಂಬುದರ ವಿವರವನ್ನು ಇಲ್ಲಿ ಓದಿದ್ದೇನೆ. ದಯಮಾಡಿ ಈ ಬಗ್ಗೆ ಅಂಕಿ ಅಂಶ ಕೊಟ್ಟರೆ ಸಾಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಗ್ರೀನ್‌ಬೆಲ್ಟ್ ಡಿಕ್ಲೇರ್ ಮಾಡತಕ್ಕಂಥ ಕಾನೂನುಗಳು ಎರಡು ಇವೆ. ಒಂದು ಲ್ಯಾಂಡ್ ರೆವಿನ್ಯೂ ಆಕ್ಟ್ ಕೆಳಗೆ ಇನ್ನೊಂದು ಟೌನ್ ಪ್ಲಾನಿಂಗ್ ಆಕ್ಟ್ ಕೆಳಗೆ ಲ್ಯಾಂಡ್ ರೆವಿನ್ಯೂ ಆಕ್ಟ್ ಕೆಳಗೆ ಮಾಡಿದ್ದನ್ನೂ ಗ್ರೀನ್ ಬೆಲ್ಟ್ ಎಂದೇ ಕರೆಯುತ್ತೇವೆ.

ಶ್ರೀ ಎಂ ವೀರಪ್ಪ ಮೊಯ್ಲಿ.— ಅಲ್ಲಿ ಎರಡು ಇರಂವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಗ್ರಿಕಲ್ಚರ್ ಅಂಡ್ ನಾನ್ ಅಗ್ರಿಕಲ್ಚರ್ ಲ್ಯಾಂಡ್ ಎಂದು ಎರಡು ಇದೆ. ಗ್ರೀನ್ ಬೆಲ್ಟ್ ಬರುವುದು ಟೌನ್ ಪ್ಲಾನಿಂಗ್ ಕೆಳಗೆ. Agricultural Land cannot be converted into non-agricultural land, ಅಷ್ಟೇಹೇಳಿದ್ದಾರೆ.

> "Not with standing anything contained in this section, no permission shall be granted to divert any land or assessed or held for the purpose of agriculture lying within the limits of green-belt to any other purpose, ಎಂದು ಅಮೆಂಡ್‌ಮೆಂಟ್ ಮಾಡಿದ್ದಾರೆ."

ಈ ಟೌನ್ ಪ್ಲಾನಿಂಗ್ ಆಕ್ಟ್ ಕೆಲವು ಸಿಟಿಗಳಲ್ಲಿ ಅಪ್ಲೈ ಆಗುತ್ತದೆ. The matter went to the High court also. ನಾನು ಹೇಳುವಂತಾದ್ದು ಇದು ಹೈಕೋರ್ಟ್‌ಗೆ ಹೋಗಿದೆ. ಹೈಕೋರ್ಟ್ ಅಭಿಪ್ರಾಯ ಕೂಡ, unless you issue another notification declaring particular area as greenbelt. ಅದು ಮೊದಲಿ ಈ ಆಕ್ಟ್‌ಕೆಳಗೆ ಸಬ್ಸಿಕ್ವೆಂಟ್ ನೋಟಿಫಿಕೇಷನ್ ಏನಿದೆ, ಏರಿಯಾ ಡಿಫೈನ್ ಮಾಡಿ, ಇಂತಹ ಸರ್ವೆ ನಂ. ಎಂದು ಹಾಕಿ, ಇದಕ್ಕೆ ಗ್ರೀನ್‌ಬೆಲ್ಟ್ ಎಂದು ಹೇಳಬೇಕಾಗುತ್ತದೆ. ನೋಟಿಫಿಕೇಷನ್ ಇನ್ನೂ ಇಷ್ಯೂ ಆಗಿಲ್ಲ. That notification has not been issued. ಮಾನ್ಯ ದೇವೇಗೌಡರು ಎತ್ತಿರತಕ್ಕ ಪ್ರಶ್ನೆ ಏನಿದೆ, Green Belt has already been declared so far as the Bangalore City is concerned under the Country Town Planning Act. The Town planning Act is not changed. ಸೆಕ್ಷನ್ ೬ರ ಕೆಳಗೆ ಆಬ್ಜೆಕ್ಷನ್ ಮಾಡುವುದನ್ನು ತಡಹಿಡಿದಿದ್ದೇವೆ. ಮಾನ್ಯ ದೇವೇಗೌಡರು ಒಂದು ಮಾತನ್ನು ಹೇಳಿದರು ಒಂದು ಸೊಸೈಟಿ ಮಾತ್ರ ನನ್ನ ಗಮನಕ್ಕೆ ಬರುವುದಕ್ಕೆ ಮೊದಲೇ ಸೆಕ್ಷನ್ ೬ ಎಲ್ಲಾ ಮುಗಿದು ಹೋಗಿದೆ. Most of the Societies ಗೆ ಜಮೀನು ಕೊಡುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.— ಮುಖ್ಯಮಂತ್ರಿಗಳು, ರೆವಿನ್ಯೂ ಮಂತ್ರಿಯವರಿಗೆ ಹೇಳದೇ ನಡೆಸುತ್ತಾ ಇದ್ದರು. ಇದು ನಿಮ್ಮ ಗಮನಕ್ಕೆ ಬಾರದೇ ಹೋಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಅವರು ಯಾವುದೋ ಒಂದು ಸೊಸೈಟಿ ಬಗ್ಗೆ ಹೇಳಿದರು, ಅದನ್ನು ನಾನು ಇಲ್ಲ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಆದರೆ ಉಳಿದದೆಲ್ಲಾ ಸೊಸೈಟಿಗಳ ಬಗ್ಗೆ ಮುಂದಿನ ಕ್ರಮ ಏನಿದೆ, ಅದನ್ನು ನಾವು ನಿಲ್ಲಿಸಿದ್ದೇವೆ. ಜೊತೆಗೆ ಗ್ರೀನ್‌ಬೆಲ್ಟ್ ಎಂದು ಏನು ಡಿಕ್ಲೇರ್ ಮಾಡಿದ್ದೇವೆ ಅದು ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಈಗಾಗಲೇ ಮನೆಗಳು ಬಂದಿವೆ, ಕನ್‌ಸ್ಟ್ರಕ್ಷನ್ ಆಗಿದೆ. It is already urbanised. ಒಂದು ಪಕ್ಕಕ್ಕೆ ಮನೆ ಬಂದಿದೆ ಇನ್ನೊಂದು ಪಕ್ಕಕ್ಕೆ ಅಗ್ರಿಕಲ್ಚರಲ್ ಲ್ಯಾಂಡ್ ಇದೆ. ಇನ್ನೊಂದು ಕಡೆಗೆ ಕನ್‌ಸ್ಟ್ರಕ್ಷನ್ ಆಗುತ್ತಿದೆ.

ಇದು ನಮ್ಮ ಗಮನಕ್ಕೆ ಬಂದಿದೆ. Because the area is already developed there is a proposal to shift the Green-belt. ಅದನ್ನು ಶಿಫ್ಟ್ ಮಾಡತಕ್ಕ ಒಂದು ರಿಕ್ವೆಸ್ಟ್ ಇದೆ. ಕೃಷ್ಣನ್ ಅವರು ಹೇಳಿದರು. ಈ ತರಹ ಅವರು ಬಂದು ಕೇಳಿದರೆ ಶಿಫ್ಟ್ ಮಾಡತಕ್ಕದ್ದು ಇದೆಯೇ ಎಂದರು. ಈ ತರಹ ರಿಕ್ವೆಸ್ಟ್ ಇದೆ. ಅದು ಇನ್ಫ್ರಿಫೈನಲೈಸ್ ಆಗಿಲ್ಲ. ಗ್ರೀನ್ ಬೆಲ್ಟ್‌ನ್ನು ಮಯಲೇಟ್ ಮಾಡಲಾಗಿದೆ, ಅಂತಹ ಸೊಸೈಟೀಸ್‌ಗೆ ಆಕ್ವಿಜಿಷನ್ ನಿಲ್ಲಿಸಿದ್ದೇವೆ. ಜೊತೆಗೆ ಗ್ರೀನ್ ಬೆಲ್ಟ್ ಏನಿದೆ ಅದನ್ನು ಬದಲಾವಣೆ ಮಾಡತಕ್ಕ ಬೇಡಿಕೆ ಸಹ ಇದೆ. Because the area has been already developed. ಅಲ್ಲಿ ಮನೆಗಳು ಬಂದಿವೆ ಕಲವು ಕಡೆಗೆ ಮನೆಗಳು ಬಂದಿವೆ. ಅರ್ಬನೈಸೇಷನ್ ಬಹಳ ಫಾಸ್ಟ್ ಆಗಿ ನಡೆಯುತ್ತಿದೆ. ಇವನ್ನು ಜನರು ಮನೆ ಕಟ್ಟಿಕೊಳ್ಳುತ್ತಿದ್ದಾರೆ. ಇಂತಹ ಪ್ರೊಟೆಕ್ಷಿಯಲ್ ಅರ್ಬನ್ ಏರಿಯಾ ಇರುವಾಗ The green belt may be shifted to another three or four miles away. There is a proposal. ಅಂತಹ ಪ್ರಪೋಸಲ್ ಇದೆ Unless the green-belt is changed, they cannot acquire the land. If the city grows, we will have to shift the green belt.

SRI B. BASAVALINGAPPA.— Why do you change?

SRI S. R. BOMMAI.— We will have to change, if the city grows.

ಶ್ರೀ ವೇದಾಂತ ಹೆಬ್ಬಾರ್.— ಅಧ್ಯಕ್ಷರೇ, ಬಸವಲಿಂಗಪ್ಪನವರು ಮಂಧ್ಯ ಇಂಟರ್‌ಫಿಯರ್ ಮಾಡಬಾರದು, ಹಾಗೂ ಬೇರೆ ಯಾರೂ ಇಂಟರ್‌ಫಿಯರ್ ಮಾಡಬಾರದು.

ಶ್ರೀ ಎಂ. ಚಂದ್ರಶೇಖರ್.— ಬೆಂಗಳೂರಿನ ಜನಸಂಖ್ಯೆ ಹೆಚ್ಚಾಗುತ್ತಿದೆ.

ಶ್ರೀ ಎಂ. ಶ್ರೀನಿವಾಸ್.— ಮಾನ್ಯ ಬಸವಲಿಂಗಪ್ಪನವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ ಅವರ ಲೆಕ್ಕದಲ್ಲಿ ಎಷ್ಟು ಜಮೀನು ಇತ್ತು ಎಂಬುದರ ಬಗ್ಗೆ ಮಾನ್ಯ ಸಭಾನಾಯಕರು ಲೆಕ್ಕ ಕೊಡಬೇಕು.

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿರಿ, ಅವರು ಎದ್ದುನಿಂತು ಮಾತನಾಡುತ್ತಾರೆ ಎಂದು ನೀವೂ ಎದ್ದುನಿಂತು ಮಾತನಾಡುತ್ತೀರಾ ? ಅಪೊಜಿಷನ್ ಪಾರ್ಟಿಯವರು ಮಾಡುತ್ತಾರೆ ಎಂದು ನೀವೂ ಮಾಡುತ್ತೀರಾ ? ದಯವಿಟ್ಟು ತಾವು ಕೂಡಿರಿ.

ಶ್ರೀ ಎಂ. ಶ್ರೀನಿವಾಸ್.— ಅಧ್ಯಕ್ಷರೆ, ನಾನು ಯಾವಾಗಲೂ ಎದ್ದುನಿಂತು ಮಾತನಾಡುವುದಿಲ್ಲ. ಬಸವಲಿಂಗಪ್ಪನವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗಿನಿಂದ ಇಲ್ಲಿಯವರೆಗೆ ಅವರ ಜಮೀನು ಎಷ್ಟಿದೆ ಎಂದು ಸಭಾನಾಯಕರು ಮುಂದಿನ ಸಭೆಗೆ ವರದಿ ಕೊಡುತ್ತಾರೆಯೇ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಇನ್ನು violation of Green-belt and distortion of the law, there is something fishy about this ಎಂದು ಹೇಳಿದ್ದಾರೆ. ಇದರಲ್ಲಿ ಕಾನೂನು ಬಹಳ ಸ್ಪಷ್ಟವಾಗಿದೆ. ಸರಕಾರದ ನಿರ್ಣಯಗಳೂ ಸ್ಪಷ್ಟವಾಗಿವೆ. ಇದರಲ್ಲಿ ಯಾವುದೇ ತಪ್ಪನ್ನು ಮಾಡಿಲ್ಲ. ಇದು ನನ್ನ ಬಹಳ ಸ್ಪಷ್ಟವಾದ ಅಭಿಪ್ರಾಯ. ಇದನ್ನು ಕಾನೂನು ಪಂಡಿತರು ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಇನ್ನು ಬರತಕ್ಕಂಥಾದ್ದು ಎನ್‌ಕ್ವೈರಿ ವಿಚಾರ. ಎನ್‌ಕ್ವೈರಿ ಯಾರು ಮಾಡಿದರು ? ಈ ಬಗ್ಗೆ ಮಾನ್ಯ ರಾಮಯ್ಯನವರು, ಮಾನ್ಯ ಪೀಡ್‌ರವರು, ವಿಕಾಂತಯ್ಯನವರಿಗೆ ಕಾಂಪ್ಲಿಮೆಂಟ್ ಕೊಟ್ಟರು. ದೇವೇಗೌಡರೂ ಕೊಟ್ಟರು. I am so happy for this .. ವಿಕಾಂತಯ್ಯನವರೂ ಸಹ ಹೆಗಡೆಯವರ ಕ್ಯಾಬಿನೆಟ್‌ನಲ್ಲಿ ಮಂತ್ರಿಗಳಾಗಿದ್ದರು. ಈ ವಿಚಾರದಲ್ಲಿ ಹೇಳುವುದಾದರೆ, ದೇವೇಗೌಡರೂ ಸಹ ಮಂತ್ರಿಗಳಾಗಿದ್ದರು. ಅವರು ಕಾವೇರಿ ಯೋಜನೆಗೆ ಹೆಚ್ಚು ಹಣ ವಿರ್ಡ್ ಮಾಡಿ ಹೆಚ್ಚು ಡೆವಲಪ್ ಮಾಡಿದ್ದರೆ ಅದರ ಕೀರ್ತಿ ಹೆಗಡೆಯವರಿಗೆ ಹೋಗಬೇಕಲ್ಲ. ಇಲ್ಲ ಅವರಿಗೇ ಹೋಗಬೇಕಲ್ಲ. ಏತಕ್ಕೆಂದರೆ ದೇವೇಗೌಡರು ಮಂತ್ರಿಗಳಾಗಿದ್ದ ಸರಕಾರದ ನಾಯಕರಾಗಿದ್ದರು. Though a Minister is very competent and he executes the work very well, the credit must go to the Leader and the entire Cabinet. Whatever good things have been done it must all go to Mr Hegde and his Cabinet.

SRI BASAVALINGAPPA.—If there is bad it should also go to him.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದನ್ನು we have to share it. ಆ ಮಾತನ್ನು ದೇವೇಗೌಡರೇ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗಾದರೆ ನಮಗೆ ಕಾವೇರಿ ಬೇಸಿನ್‌ನವರು ಹೊಗಳಬೇಕು. ಕೃಷ್ಣಾಬೇಸಿನ್‌ನವರು ಬೈಯಬೇಕಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅದೂ ಹೆಗಡೆಯವರಿಗೇ ಹೊಗಳಬೇಕು. ದೇವೆ ಗೌಡರಿಗಲ್ಲ. ಕೃಷ್ಣ ಬೇಸಿನ್‌ನಲ್ಲಿ ಜಡಿಮೆ ಕೆಲಸ ಮಾಡಿದ್ದರೆ ಅದರ ಕ್ರೆಡಿಟ್ ಅವರಿಗೂ ಹೆಗಡೆಯವರಿಗೇ ಹೊಗಳಬೇಕು.

When the High-level Committee was going through the records, the Revenue Commissioner discussed the matter with me. Revenue Commissioner suggested that an enquiry under the Co-operation Act should be done by the Department of Co-operation. The Revenue Commissioner suggested that enquiry will have to held by the Registrar of Co-operative Societies ಪ್ರೊಸೀಡಿಂಗ್ಸ್ ರಿಪ್ಲಿಸುವಂತೆ ಆಜ್ಞೆ ಹೊರಡಬಗ್ಗೆ ಮಾನ್ಯ ಸದಸ್ಯರಾದ ರಾಮಯ್ಯನವರು ಕೇಳಿದ್ದಕ್ಕೆನಾನು ಸರಿಯಾಗಿ ಉತ್ತರ ಕೊಡಬೇಕಾಗುತ್ತದೆ. ಈ ಬಾಬು ವಿಚಾರಣೆಗೆ ಆರ್ಡರ್ ಮಾಡಿದ್ದು ೧೦-೪-೮೮ಕ್ಕೆ ಇನ್ವೆಸ್ಟಿಗೇಷನ್ ರಿಪೋರ್ಟ್ ಬಂದಿದ್ದು ೧೬-೮-೮೮ಕ್ಕೆ, ಮತ್ತೆ ಫೈನಲ್ ರಿಪೋರ್ಟ್ ಕೊಟ್ಟಿದ್ದು ೧೬-೨-೮೯ಕ್ಕೆ ಮತ್ತೆ ೧೬-೮-೮೮ಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸೆಕ್ರೆಟರಿ ಲೆವೆಲ್‌ನಲ್ಲಿ ಚರ್ಚೆ ಮಾಡಿದಾಗ ಇದರಲ್ಲಿ ಸರ್ಕಾರ ಏತಕ್ಕೆ ಪಾಲ್ಗೊಳ್ಳಬೇಕು ಎನ್ನುವ ವಿಚಾರ ಬಂತು. ಆಗ "The concerned parties may go to the court in criminal action." That was on 16-8-88, ಎಂದು ಹೇಳಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಕಾನೂನು ಪ್ರಕಾರ ತಪ್ಪು ಇದ್ದರೆ ಕೋರ್ಟ್ ಹಂತ ಎಂದರೆ ಲಿಕ್ವಿಡೇಟರ್ ನೇಮಿಸಕ್ಕಾಗುವುದು, ಸರ್‌ಚಾರ್ಜ್ ಮಾಡತಕ್ಕದ್ದು ಮತ್ತು ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡತಕ್ಕದ್ದು ಪ್ರೈಮಾಫೇಸಿ ಕೇಸ್ ಇದ್ದರೆ ಲಿಕ್ವಿಡೇಟರ್‌ನ್ನು ನೇಮಿಸಬಹುದು. ಏಕೆಂದರೆ ಇದು ಕೋ ಆಪರೇಟರ ರೂಪಾಯಿಗಳ ವ್ಯವಹಾರ ಆಗಿದೆ. ಇದರಲ್ಲಿ ಪಬ್ಲಿಸಿಗಳು ಇದ್ದಾರೆ ಶೇರು ಹೋಲ್ಡರ್ಸ್, ಇದ್ದಾರೆ. Once we take over the society, it becomes the responsibility of the Government to give sites to the Members. ಸೂಪರ್‌ಸೀಡ್ ಮಾಡಿದಾಗ ಲೀಗಲ್ ವ್ಯಾಲಿಡ್ ಮೆಂಬರ್‌ಶಿಪ್ ಇರುವವರಿಗೆ ಹಣವನ್ನು ವಾಪಸ್ ಕೊಡಬೇಕಾಗಿಂತ್ತದೆ ಸದಸ್ಯರು ಎಷ್ಟು ಹಣ ಕಟ್ಟಿದ್ದಾರು? ಕಮಿಷನ್ ಎಷ್ಟು ಕೊಟ್ಟಿದ್ದಾರೆ ಅವರ ಅಸೆಟ್ಸ್ ಎಷ್ಟು ಇರುತ್ತದೆ ಇವರ ಲಯಬಿಲಿಟಿ ಎಲ್ಲಾ ಸರ್ಕಾರಕ್ಕೆ ಬರುತ್ತದೆ. ಆಗ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಈ ತರಹದ ಸೊಸೈಟಿಗಳಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದರೆ ಅಲ್ಲಿ ಪಾಲ್ ಪ್ರಾಕ್ಟೀಸ್ ಆದರೆ ಮತ್ತು ಸರಿಯಾದ ದಾಖಲೆಗಳು ಇಲ್ಲದಿದ್ದರೆ ಅದಕ್ಕೆ ಸರ್ಕಾರ ಹೊಣೆಯಾಗಬೇಕಾಗುತ್ತದೆ. ಆಡಳಿತಾಧಿಕಾರಿಗಳನ್ನು ಸೊಸೈಟಿಗಳಿಗೆ ನೇಮಕ ಮಾಡಿದರೆ ಆಗ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಅದರಲ್ಲಿ ಸರ್ಕಾರದ ಶೇರು ಆಗಲಿ ಹಣ ಆಗಲಿ ತೊಡಗಿಸಿಲ್ಲ. There is no Government investment. There is no Government's share amount. Has the Government any self-interest in these societies? But there is public interest. I do agree. It is the duty of the Government to protect the interest of the Members of the Society. ೧೬-೮-೮೮ಕ್ಕೆ ಆಜ್ಞೆ ಆಗುತ್ತದೆ. ರಿಜಿಸ್ಟ್ರಾರ್ ಅವರು ತಮ್ಮ ಅಭಿಪ್ರಾಯಂಪನ್ನು ಕೊಡುತ್ತಾರೆ. ಅವರ ಅಭಿಪ್ರಾಯಂಪನ್ನು ತಳ್ಳಿ ಹಾಕುವ ಅಧಿಕಾರ ಮುಖ್ಯಮಂತ್ರಿಗಳಿಗೆ ಇದೆ. If the Chief Minister wanted it the opinion submitted by the Registrar could have been over-ruled and the entire proceedings could have been stayed. Government and the Chief Minister thought is not to stay the investigation. The opinion given by the Registrar was respected by the Government. Supposing we were to over-rule her opinion, she ought to have stayed it. That officer, no doubt was bold enough to give a truthful opinion.

SRI Y. K. RAMAIAH.— It was a decision to stop the investigation. "It is decided not to..."

SRI S.R. BOMMAI.— It was not a decision. It was an opinion expressed in the letter.

(Interruption)

SRI S.R. BOMMAI.— The Registrar says it is not in the public interest to drop the investigation. Immediately the Chief Minister could have over-ruled it and stayed the Proceedings. But we did not do that. On receiving her letter, we asked them to continue the investigation. Interim report was received and thereafter in Fubruary 1989, the final report was received. Therefore the Government's intention was to honour the view of the Registrar and continue the investigation and get a final Report. Therefore one must appreciate the Government. There is bonafide in the actions of the Government and the proceedings have taken place in a legal way. One part of the view of the Government was that why should the Government involve unnecessarily when there is no Government interest. But dispite the opinion of the Registrar, if the Government wanted to stop the investigation, it could have directed the Registrar straightaway to stop the investigation.

(Interruption)

SRI M.S. NARAYANA RAO.— Under what provision?

SRI S.R. BOMMAI..— Government has got inherent powers under the Act. So, the final Report was received on 16th. I have already read Section 64 It is made abundantly clear.

> "64 (4) When an inquiry is made under this section, the Registrar shall communicate the result of the inquiry to the society and to the cooperative society, if any, to which what society is affiliated."

It is mandatory. Government has taken action under the law what it should do. ಇವೊತ್ತು ಏನು ಕ್ರಮವನ್ನು ಕಾನೂನು ಪ್ರಕಾರ ಸರ್ಕಾರ ಕೈಗೊಳ್ಳಬೇಕಾಗಿತ್ತೋ ಅದನ್ನು ಸರ್ಕಾರ ಕೈಗೊಂಡಿದೆ. ರಿಪೋರ್ಟ್ ತಾರೀಖಿಗೆ ಅದು ಬಂದಿದೆ. Secretary to go through and take action ಸೆಕ್ರೆಟರಿಯವರಿಗೆ ಬಂದ ಮೇಲೆ ಮುಂದಿನ ವಾರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಸೆಕ್ಷನ್ ೬೪ರ ಕೆಳಗೆ. ಕ್ರಮ ತೆಗೆದುಕೊಂಡಿದ್ದಾರೆ. ಸೊಸೈಟಿಗಳಿಗೆ ಇಂಟಿಮೇಶನ್ ಕೊಟ್ಟಿದ್ದಾರೆ. ಅವರಿಂದ ರಿಪ್ಲೈ ಬಂದಿಲ್ಲ. Then comes Section 68. If you want to appoint an Administrator under Section 30, you have to give notice. Supersession of Committee

> "30 (1) If, in the opinion of the Registrar, the Committee of any cooperative society persistently makes default or is negligent in the performance of the duties imposed on it by this Act or the rules or the bye-laws, or commits any act which is prejudicial to the interests of the

society or its members, or is otherwise not functioning properly..."

ಇದೆಲ್ಲಾ ಹೇಳಿ ಕೊನೆಗೆ,

"The Registrar may, after giving the committee an opportunity to state its objections, if any, by order in writing, removed the committee and appoint an administrator to manage the affairs of the society for such period or periods *not* exceedings two years as may be specified by order of the Registrar;"

If the society persists. They have to correct them. If they fail to correct then action will be taken. That stage has not reached. It is for the Registrar first to give notice and then if they rectify, no further action is necessary. If they fail to rectify, rule 68 comes in here and then, usually by a report to the committee, on the basis of the report, administrator will be appointed by the Government. Stages are there. Law is there. If they commit murder, without trial...

ಶ್ರೀ ಬಿ. ಬಸವಲಿಂಗಪ್ಪ.— ಇಲ್ಲಿ ಕಾನೂನಿನ ವಿಚಾರ ಸ್ಪಷ್ಟವಾಗಿದೆಯೇ?

SRI S.R. BOMMAI.— Law is very clear. ಇನ್ನೂ ಒಂದೆರಡು ವಿಚಾರಗಳನ್ನು ಹೇಳಿದ್ದಾರೆ. ಈಗ ಎಲ್ಲಾ ವಿವರಗಳಿಗೆ ನಾನು ಇಲ್ಲಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಕೆಲವು ಸೊಸೈಟಿಗಳವರು ೬ಲಕ್ಷ, ಮೂರು ಲಕ್ಷ, ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು. ಆದು ಆಡಿಟ್ ರಿಪೋರ್ಟ್‌ನಲ್ಲಿ ಇದೆ. ಹಣವನ್ನು ಏತಕ್ಕಾಗಿ ಕೊಟ್ಟಿದ್ದಾರೆ, ಯಾವುದಕ್ಕಾಗಿ ಕೊಟ್ಟಿದ್ದಾರೆ. ಎಂಬ ಬಗ್ಗೆ ಎಲ್ಲಾ ವಿಚಾರಗಳೂ ಇವೆ. ಲ್ಯಾಂಡ್ ೦ಸರ್ ಹತ್ತಿರ ಅಗ್ರಿಮೆಂಟ್ ಇರುತ್ತದೆ. ಹಣವನ್ನು ಅಗ್ರಿಮೆಂಟ್‌ಗೆ ಕೊಟ್ಟಿದ್ದಿರಬಹುದು ಹಾಗೂ ಭೂಮಿ ಖರೀದಿ ಮಾಡತಕ್ಕಂಥದ್ದು ಕೂಡ ಇದ್ದಿರಬಹುದು. ಹೀಗೆ ಹಣವನ್ನು ಯಾವುದಕ್ಕೆ ಕೊಟ್ಟಿದ್ದಾರೆ ಎಂಬುದನ್ನು ವಿಚಾರಣೆ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ — ಆಡಿಟ್ ರಿಪೋರ್ಟ್‌ನಲ್ಲಿ ಇಂಥವರಿಗೆ ಒಂದು, ಲಕ್ಷ ಕೊಟ್ಟಿದೆ, ಇಂಥವರಿಗೆ ೧೦ ಲಕ್ಷ ಕೊಟ್ಟಿದೆ ಎಂದೆಲ್ಲ ಸಾದಿಲ್ವಾರು ಲಿಕ್ಕ ಕೂಡ ಇರುತ್ತದೆ. ಆದಕ್ಕೆಲ್ಲ ಸೊಸೈಟಿಯವರ ಜವಾಬ್ದಾರಿಕೆ ಇರಬೇಕು. ಏತಕ್ಕೆ ಕೊಟ್ಟಿದ್ದಾರೆಂಬುದನ್ನು ನಾನು ಹೇಳುವುದಕ್ಕಾಗುವುದಿಲ್ಲ. That is a matter to be enquired.

ಶ್ರೀ ಬಿ. ಬಸವಲಿಂಗಪ್ಪ.— ಅಧ್ಯಕ್ಷರೇ, ಸರ್ಕಾರ ನಡೆಸುವವರು ಪಬ್ಲಿಕ್ ಲೈಫ್‌ನಲ್ಲಿ ಪರಿಣಾಮಕಾರಿಯಾಗಿ ಇರುವುದಷ್ಟೇ ಅಲ್ಲ ಅವರ ಕಾಂಡಕ್ಟ್, ತಿಳಿವಳಿಕೆ ಚೆನ್ನಾಗಿದೆ ಎನಿಸುವಂತಿರಬೇಕು, ಎಲ್ಲವನ್ನೂ ಸರಿಯಾಗಿ ಮಾಡಿದ್ದಾರೆ ಎಂಬ ಭಾವನೆ ಬರಿಸುವಂತಿರಬೇಕು, ಯಾರೋ ಮಧ್ಯಸ್ಥಿಕೆದಾರರಿಗೆ ಸೊಸೈಟಿಗಳವರು, ಕೋಟ್ಯಂತರ ರೂಪಾಯಿಗಳನ್ನು ನಿವೇಶನಕ್ಕಾಗಿ ಕೊಡುವುದು ಸರಿ ಎಂದು ನೀವು ಹೇಳುವುದಾದರೆ ಅದು ಸರಿಯಲ್ಲ ಎನ್ನುತ್ತೇನೆ ನಾನು.ಸೊಸೈಟಿಯವರ ಪರವಾಗಿ ಅಥವಾ ಕಂಟ್ರಾಕ್ಟರ್ ಪರವಾಗಿ ಮಧ್ಯಸ್ಥಿಕೆದಾರ ನಾಳೆ ನಿಮ್ಮ ಬಳಿ ಬಂದು ಲ್ಯಾಂಡ್ ಅಕ್ವಿಜಿಷನ್‌ಗೆ ನೋಟಿಫಿಕೇಶನ್ ಮಾಡಿಸಿಕೊಳ್ಳುತ್ತಾನೆ ಆಗ.....

(ಗದ್ದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಒಂದು ಮಾತನ್ನು ಹೇಳುತ್ತೇನೆ. Rule of law. I am in agreement I am in cent per cent agreement. ಹೌದು ಸರ್ಕಾರ ನಡೆಸುವವರು ಎಚ್ಚರವಾಗಿರಬೇಕು. ತಾವೂ ಸಹ ರೆವಿನ್ಯೂ ಮಂತ್ರಿಗಳಾಗಿದ್ದೀರಿ. ತಮಗೆ ಹೆಚ್ಚುವರಿ ಭೂಮಿ ಎಷ್ಟು ಜನ ಪಡೆದುಕೊಂಡಿದ್ದಾರೆ ಎಂಬುದು ಗೊತ್ತೇ ? ಅದೂ ಹೆಚ್ಚುವರಿ ಭೂಮಿ ಭೂಸುಧಾರಣಾ ಕಾಯಿದೆಯನ್ವಯ ಇರುವಂಥದು. ಒಬ್ಬೊಬ್ಬರ ಹತ್ತಿರ ೫೦೦ ಎಕರೆ, ಸಾವಿರ ಎಕರೆ ಇದೆ. ನಿಮ್ಮ ಸರ್ಕಾರ ಮಾಡಿದ್ದು ಅಂತ ಅಲ್ಲ, violation of land reforms continuously done in Bangalore

city much more. ನಮ್ಮಲ್ಲಿ ಕಾನೂನು ಮಂತ್ರಿಯಾಗಿದ್ದವರೂ ಇದ್ದಾರೆ. ಒಬ್ಬರು ೧೦೦೦ ಎಕರೆ ತೋಟದ ಭೂಮಿ ಇಟ್ಟುಕೊಂಡಿದ್ದಾರೆ, ಅವರು ನನಗೂ ಗೆಳೆಯರು ನಿಮಗೂ ಗೆಳೆಯರು. ನಾನು ಮುಖ್ಯ ಮಂತ್ರಿಯಾದ ಮೇಲೆ ಅವರ ಲ್ಯಾಂಡ್ ರಿಫಾರ್ಮ್ಸ್ ಫೈಲ್ ಹುಡುಕಿಸಿದರೆ ಆ ಫೈಲೇ ಇಲ್ಲ ಅಲ್ಲಿ. How patently Land Reform Act has been violated ? ಆ ತೋಟಕ್ಕೆ ಪದೇ ಪದೇ ನೀವು ಹೋಗುತ್ತೀರಿ. ನಾನಂ ಹೋಗುವುದಿಲ್ಲ ಅಷ್ಟೇ.

(ಗದ್ದಲ)

ಶ್ರೀ ಬಿ. ಬಸವಲಿಂಗಪ್ಪ.— ಇಲ್ಲಿ ನೀವು ನಮ್ಮನ್ನು ಹೆದರಿಸುವುದೇನು ? ಆ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದಲ್ಲ, ಮಂತ್ರಿಗಳು, ಸರ್ಕಾರ ಎಷ್ಟೇ ಪ್ರಯತ್ನ ಮಾಡಿದ್ದರೂ ಇಂಥವರು ಏನು ಇದ್ದಾರೆ They have got their ingenuity in this country. ನಮ್ಮ ರಾಜ್ಯ ಅಂತ ಅಲ್ಲ, ಎಲ್ಲ ಕಡೆ ಇಂಥಾದ್ದು ಇರುತ್ತದೆ. ಕಾನೂನನ್ನು ಗೌರವಿಸುವ ಮಟ್ಟಕ್ಕೆ ನಾವಿನ್ನೂ ಬರಬೇಕಾಗಿದೆ. ಕಾನೂನು ಪಾಲನೆ ಮಾಡುವ ನಾಗರೀಕರನ್ನು ತಯಾರು ಮಾಡಬೇಕಾಗಿದೆ Let us be fair. ಇವತ್ತಿನ ಸ್ಥಿತಿ ಆ ರೀತಿ ಇದೆ.

ಶ್ರೀ ಸಿ. ಬೈರೇಗೌಡ.— ಭೂಸುಧಾರಣಾ ಕಾಯಿದೆ ಉಲ್ಲಂಘಿಸಿ ಸಾವಿರಾರು ಎಕರೆ ತೋಟದ ಭೂಮಿ ಇಟ್ಟುಕೊಂಡಿರುವವರು ತಮಗೆ ಗೊತ್ತು ಎನ್ನುತ್ತಿದ್ದೀರಲ್ಲ, ಅದನ್ನು ನೀವು ಮುಖ್ಯಮಂತ್ರಿಗಳಾಗಿ ಹೇಳುತ್ತಿದ್ದೀರೋ ಸಾಮಾನ್ಯ ನಾಗರೀಕರಾಗಿ ಹೇಳುತ್ತಿದ್ದೀರೋ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮುಖ್ಯಮಂತ್ರಿಯಾಗಿ ಮತ್ತು ಕಾರ್ಯಕರ್ತನಾಗಿ ಹೇಳುತ್ತಿದ್ದೀನಿ. ಜವಾಬ್ದಾರಿಯಿಂದ ನಾನು ತಪ್ಪಿಸಿಕೊಳ್ಳುವುದಿಲ್ಲ. ಕಾನೂನಿನ ಚೌಕಟ್ಟನ್ನು ಮೀರುವವರು ಯಾವಾಗಲೂ ಇರುತ್ತಾರೆ. There are 5000 people who are violating in Bangalore city.

SRI R. VENKATARAMAIAH.— Government has got inherent powers. Correct them.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಕೆಲವರ ಮೇಲೆ ಕೇಸುಗಳನ್ನು ಹಾಕಿದ್ದೇವೆ, ಇನ್ನೂ ಕೆಲವು ಕೇಸುಗಳಿಗೆ ಇಂಜಂಕ್ಷನ್ ಮಾಡಿಸಿದ್ದೇವೆ. ನೋಟೀಸ್ ಕೊಟ್ಟು ಹಿಯರಿಂಗ್ ನಡೆಯುತ್ತಿದೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನ್ನು ವಯಲೇಷನ್ ಬೆಂಗಳೂರಿನಲ್ಲಿ ನಡೆಯುತ್ತಿದ್ದರೂ ಕೂಡ, ಈ ವ್ಯವಹಾರಗಳ ಬಗ್ಗೆ ಒಂದು ಕೇಸ್ ಕೂಡ ಇರಲಿಲ್ಲ. 5000 cases have been detected. Notices have been issued. Yes, all the compliments to GVK Rao is a compliment to me. I accept. It is a compliment to me, I am very happy. ಅವರು ವದಿ ಕೊಟ್ಟಿದ್ದಾರೆ. ಕೆಲವರಿಗೆ ಈಗಾಗಲೇ ನೋಟೀಸ್ ಇಷ್ಯೂ ಮಾಡಿದ್ದೇವೆ ಕಾನೂನು ಪ್ರಕಾರ ಅವರಿಂದ ಉತ್ತರ ಬರಬೇಕಂ. ಅಡ್ಮಿನಿಸ್ಟ್ರೇಟರ್ ಮಾಡತಕ್ಕಂಥಾದ್ದಕ್ಕೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡೋಣ. ಸೀರಿಯಸ್ ಅಲಿಗೇಷನ್ಸ್ ಇದೆ. ದಳ್ಳಾಳಿಗಳು ಇದ್ದಾರೆ. ಇಲ್ಲವೆಂದು ಹೇಳುವುದಕ್ಕೆ ನಾನಂ ತಯಾರಿಲ್ಲ. ಹಣದ ವ್ಯವಹಾರ ವಾಗಿದೆ, ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಇದು ತಮಗೆ ನನಗೆ ಎಲ್ಲರಿಗೂ ಕೂಡ ಗೊತ್ತಿದೆ. ಒಂದು ಲ್ಯಾಂಡ್ ಪರ್ಚೇಸ್ ಮಾಡಿ ಅದನ್ನು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೆ ಹೋದರೆ ಅಲ್ಲಿ ಪಾಪಾಮೂಲು ಕೂಡದೇ ರಿಜಿಸ್ಟರ್ ಆಗುವುದಿಲ್ಲ. ಇದನು ನಾನು ರೆವಿನ್ಯೂ ಮಂತ್ರಿಯಾಗಿ, ಮುಖ್ಯ ಮಂತ್ರಿಯಾಗಿ ನೋಡಿದ್ದೇನೆ.

ಶ್ರೀ ಆರ್. ವೆಂಕಟರಾವಯ್ಯ.— ಅದನ್ನೆಷ್ಟಾವು ಹೇಳಬೇಡಿ. ಕಂಟ್ರೋಲ್ ಮಾಡಿ.

SRI S. R. BOMMAI.— I do not want to deceive myself. ಈ ಸಂಬಂಧದಲ್ಲಿ ಬೆಂಗಳೂರಿನಲ್ಲಿರತಕ್ಕಂತಹ ಸಬ್ ರಿಜಿಸ್ಟ್ರಾರ್ ಅನ್ನು ಸಸ್ಪೆಂಡ್ ಮಾಡಿದ್ದೇನೆ. ಬೇರೆ ೮ ಜನರನ್ನು ಸಸ್ಪೆಂಡ್ ಮಾಡಿದ್ದೇನೆ. ಪುತ್ತೂರು ಮಂಗಳೂರು, ಧಾರವಾಡದಿಂದ ತೆಗೆದು ಬೆಂಗಳೂರಿಗೆ ಹಾಕಿ ಇಲ್ಲಿದ್ದಂತಹ ಸಬ್ ರಿಜಿಸ್ಟ್ರಾರ್‌ರವರನ್ನು ತೆಗೆದು ಅಲ್ಲಿಗೆ ಹಾಕಿದ್ದೇನೆ. ಇದರಿಂದ ಈಹಾವಳಿ ಸ್ವಲ್ಪ ಕಡಿಮೆಯಾಗಿರಬಹುದು. ಆದರೆ ಪೂರ್ಣವಾಗಿ ಇದು ನಿಂತಿದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಈ ವ್ಯವಸ್ಥೆ ಏನು ಇದೆ, ಅದು ಅಷ್ಟು ಸುಲಭವಾಗಿ ಹೋಗತಕ್ಕಂಥಾದ್ದು ಅಲ್ಲ. ನಾನು ಮಂತ್ರಿಯಾಗಿ ಕೂಡ ನೋಡಿದ್ದೇನೆ. ನೀವು ಮಂತ್ರಿಯಾಗಿದ್ದಾಗಲೂ ಕೂಡ ಇದು ನಡೆಯುತ್ತಿತ್ತು.

ಒಬ್ಬ ಮಾನ್ಯ ಸದಸ್ಯರು.— ಅವರು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯಾಗಿದ್ದಾಗ, ಬಸವಲಿಂಗಪ್ಪನವರಿಗೆ ಬೆಂಗಳೂರಿನಲ್ಲಿ ಏಷ್ಟು ಲ್ಯಾಂಡ್ ಇದೆ ಎಂದು ಹೇಳುತ್ತೀರಾ ?

೬-೩೦ ಪಿ. ಎಂ.

ಶ್ರೀ ಎಂ. ರಘುಪತಿ.— ಅವರ ಹೆಸರಿನಲ್ಲಿ ಇಲ್ಲ. ಅವರು ಬುದ್ಧಿವಂತರು...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.— ಕನಿಷ್ಠ ಮಾಡಿ ಎಂದು ಕೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಇದರಲ್ಲಿ ಅವ್ಯವಹಾರಗಳಾಗಿದೆ. There is cheatting. There is embezzelment, and forgery. ಇದು ನನಗೆ ಮೆನವರಿಕೆಯಾಗಿದೆ. ಪ್ರೈಮಾಫೇಸಿ ಕೇಸ್ ಇದೆ, ಲೀಗಲ್ ಆಗಿ ಇದರಲ್ಲಿ ಪ್ರೊಸೀಡ್ ಮಾಡಬೇಕಾಗುತ್ತದೆ.

(ಗೊಂದಲ)

I want to declare the intention of the Government. Guilty must be punished according to law.

ಶ್ರೀ ಎಂ. ರಘುಪತಿ.— ಅಧ್ಯಕ್ಷರೆ...

ಶ್ರೀ ಎಂ. ಎಸ್. ಉಸ್ತಾದ್.—ರಘುಪತಿಯವರೇ, ನಿಮಗೆ ಮಂತ್ರಿ ಪದವಿ ಕೊಡುವುದಿಲ್ಲ.

(ಗೊಂದಲ)

SRI M. MALLIKARJUNA KHARGE.—What is this ?

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಸಿಬಿಐ ನವರು ಹತ್ತು ಸಾವಿರ ಕೇಸನ್ನು ಇನ್‌ವೆಸ್ಟಿಗೇಟ್ ಮಾಡಿದರು. ಒಂಭತ್ತು ಸಾವಿರ ಕೇಸನ್ನು ಪತ್ತೆ ಮಾಡಿದರು. ಇದರಲ್ಲಿ ಐದು ಸಾವಿರ ಕೇಸ್‌ಗಳನ್ನು ಫೈಲ್ ಮಾಡಿದರು ಐದು ನೂರು ಕೇಸ್ ಪ್ರಾಸ್ಪಿಕ್ಯೂಟ್ ಆಗಿದೆ. ಆ ೫೦೦ ಕೇಸ್‌ನಲ್ಲಿ ಶಿಕ್ಷೆ ಆಕ್ಟಿಟ್ ಆಗಿದೆ ಇದು ಸಿಬಿಐ ಹಣೆಬರಹ ಈ ಸಿಬಿಐ ಯನ್ನು ಕಟ್ಟಿಕೊಂಡು ಆ ಕಡೆಯವರು ಕುಣಿದಾಡುತ್ತಾರೆ. ಇಷ್ಟರವರೆಗೆ ಸಿಬಿಐ ಗೆದ್ದಿರುವುದು ಒಂದೇ ಕೇಸ್.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್‌ಸೆಂಟ್ ಕೊಟ್ಟಿದ್ದನ್ನು ವಿತ್‌ಡ್ರಾ ಮಾಡಿಕೊಂಡರು ಏನೂ ಆಗುವುದಿಲ್ಲ ಎಂದು ಅಲ್ಲವೇ ?

ಶ್ರೀ ಎಂ. ರಘುಪತಿ.—ಖರ್ಗೆಯವರೇ, ನೀವು ದೇವರಾಜ ಅರಸ್ ಕ್ಯಾಬಿನೆಟ್‌ನಲ್ಲಿ ಇದ್ದುಕೊಂಡು ಸಿಬಿಐಗೆ ಕೊಟ್ಟ ಕನ್‌ಸೆಂಟ್ ಅನ್ನು ವಿತ್‌ಡ್ರಾ ಮಾಡಿದ್ದೀರಿ. ನಿಮಗೆ ನೈತಿಕ ಹಕ್ಕಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಇಲ್ಲಿ ಒಂದು ವಿಚಾರ ನನಗಂತೂ ಅರ್ಥವಾಗುತ್ತದೆ. ರಘುಪತಿಯವರ ಕಷ್ಟ ನೋಡಿದರೆ ನಮಗೆ ಬಹಳ ಚಿಂತೆಯಾಗುತ್ತದೆ. ಅವರನ್ನು ಬೇಗನೆ ಮಂತ್ರಿಯನ್ನಾಗಿ ಮಾಡಿಬಿಡಿ ಹಾಗೆಯೇ ರಮೇಶ್‌ಕುಮಾರ್‌ರವರನ್ನು ಮಂತ್ರಿಯನ್ನಾಗಿ ಮಾಡಿಬಿಡಿ. ಅವರಿಬ್ಬರನ್ನೂ ಮಂತ್ರಿಗಳನ್ನಾಗಿ ಮಾಡಿ ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಬಿಡಿ.

(ಗೊಂದಲ)

ಶ್ರೀ ಎಂ. ರಘುಪತಿ.—ನಾನು ಮಂತ್ರಿಯಾಗಿದ್ದರೆ ಸುಮ್ಮನೆ ಕುಳಿತುಕೊಳ್ಳುತ್ತಿದ್ದೆನೆ ನಿಮ್ಮನ್ನು ನೇಣಾಂ ಹಾಕುವುದೇ ನನ್ನ ಕೆಲಸ.

ಶ್ರೀ ರಮೇಶ್‌ಕುಮಾರ್.—ಅಧ್ಯಕ್ಷರೇ, ಇಲ್ಲಿ ನಮ್ಮ ಲೀಡರ್ ಇದ್ದಾರೆ. ರಾಮಪ್ಪನವರು ನನ್ನ ಬಗ್ಗೆ ಹೇಳಿದ್ದಾರೆ. ಮಂತ್ರಿ ಕೆಲಸ ಬೇಡ ಎಂದು ಯಾರಾದರೂ ಈ ನಮ್ಮ ಪಕ್ಷದಲ್ಲಿದ್ದು ಹೇಳಿ

ದ್ದಾರೆಯೇ ಆದನ್ನು ನಾನು ಹೇಳಿರತಕ್ಕಂಥದ್ದು ಮಂತ್ರಿ ಕೆಲಸಕ್ಕೋಸ್ಕರ, ಎಕ್ಸೈಜ್ ಕಂಟ್ರಾಕ್ಟರ್** ನಾನಲ್ಲ. Be careful when you take my name.

(ಗೊಂದಲ)

SRI M. RAMESH KUMAR.—I am not here for excise contractors.

ಶ್ರೀ ಎಂ. ರಾಮಪ್ಪ.—ಅದೇನು ಮಾಡಿಕೊಳ್ಳುತ್ತೀಯೋ ಮಾಡಿಕೋ!

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಸಮಾಧಾನ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಬಿ ಎಸ್. ಯಡಿಯೂರಪ್ಪ.—ಸಮ್ಮ ಅನುಕೂಲಕ್ಕೋಸ್ಕರ ಸಿಬಿಐ ಮತ್ತು ಸಿಓಡಿಯನ್ನು ರಚನೆ ಮಾಡತಕ್ಕಂಥದ್ದು. ಆದರೆ ರಾಜ್ಯ ಸರ್ಕಾರ ನೋಡಿದರೆ ಸಿಬಿಐ ಸರಿಯಾಗಿಲ್ಲ ಎಂದು ಹೇಳಿದರೆ, ಕೇಂದ್ರ ಸರ್ಕಾರ ಸಿಓಡಿ ಸರಿಯಾಗಿಲ್ಲ ಎಂದು ಹೇಳಿದರೆ ಯಾವ ತನಿಖಾ ದಳವನ್ನು ಈ ರಾಜ್ಯದ ಜನ ಒಪ್ಪಬೇಕು. ಈ ಸಿಸ್ಟಂ ಒಳ್ಳೆಯದಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಅಧಿಕಾರಿಗಳಿಗೆ ರಾಜಕಾರಣದ ಲೇಪವನ್ನು ಯಾರೂ ಹಚ್ಚಬಾರದು We never said COD is bad, though it is under you.

SRI S. R. BOMMAI,—They are permanent features. ಯಾವ ಸರ್ಕಾರ ಬಂದರೂ ಅದು ಇರುತ್ತದೆ. ಇವತ್ತು ಯಾವ ರಿಪೋರ್ಟ್ ಇದೆ, ಆ ಬಗ್ಗೆ ಕಾನೂನು ಪ್ರಕಾರ ಸರ್ಕಾರ ಕ್ರಮ ಕೈಗೊಂಡಿದೆ. ಈ ಸರ್ಕಾರ ಬಂದಮೇಲೆ.....

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ್ದೇನೆ. ಏನೆಂದರೆ, ಶ್ರೀಮಾನ್ ರಮೇಶ್‌ಕುಮಾರ್ ರವರ ಪ್ರಾಮಾಣಿಕತೆಯನ್ನು ಇಲ್ಲಿ ಯಾರೂ ಪ್ರಶ್ನೆ ಮಾಡಿಲ್ಲ ಇಲ್ಲಿ ಯಾರು ಮಾಡಿದ್ದಾರೋ ನನಗಂತೂ ಗೊತ್ತಿಲ್ಲಿ, ಆದರೂ ಅವರು ಈ ಬಗ್ಗೆ ಒಂದು ಮಾತನ್ನು ಹೇಳಿದರು. ಏನೆಂದರೆ ಎಕ್ಸೈಜ್ ಕಂಟ್ರಾಕ್ಟರ್ಸ್ ಹಿಂದೆ ಹೋಗುವ** ಎಂದು ಹೇಳಿದ್ದಾರೆ, ಯಾರೇ ಆಗಲೀ, ಅವರೇ ಆಗಲೀ. ಈ ಸದನದಲ್ಲಿ ಯಾವುದೇ ಸದಸ್ಯರು ಆಗಲೀ, ಆ ಪದವನ್ನು ಬಳಕೆ ಮಾಡಿ ಹೊಲಿಸಿಕೊಳ್ಳುವುದು ಸರಿಯಲ್ಲ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

MR. SPEAKER.—I will expunge it.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—**ಏನ್ನುವುದು ಫೇತ್‌ಫುಲ್ ಅನಿಮಲ್.

(ಗೊಂದಲ)

ಅಧ್ಯಕ್ಷರು —ನಾಯಿ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ನೀವೂ ಈ ಬಗ್ಗೆ ಮಾತನಾಡಬೇಡಿ, ಅವರೂ ಮಾತನಾಡುವುದು ಬೇಡ. I will expunge it.

(ಗೊಂದಲ)

ಶ್ರೀ ರಘುನಾಥ ರೈ.—ಪ್ರಾಮಾಣಿಕತೆಯ ಬಗ್ಗೆ.....

ಶ್ರೀ ಕೆ. ಲಕ್ಕಪ್ಪ.—ಅದು ಫೇತ್‌ಫುಲ್ ಅನಿಮಲ್ ಅದರ ಟೈಟಲ್ ಇಟ್ಟುಕೊಂಡು ಅವರೆ ಕೀರ್ತಿ ಸಂಪಾದನೆ ಮಾಡಿಕೊಳ್ಳಲಿ.....

ಅಧ್ಯಕ್ಷರು.—ಲಕ್ಕಪ್ಪನವರೇ, ಅವರ ಉತ್ತರ ಕೇಳಿ.

ಶ್ರೀ ಕೆ. ಲಕ್ಕಪ್ಪ.—ಆ ತರಹ ಹೆದರಿಕೊಂಡು ಕುಳಿತುಕೊಳ್ಳುವುದಿಲ್ಲ ನಾವು ಅಂಥಾದ್ದು ಏನೂ ಮಾಡಲಿಲ್ಲ.....

(ಗೊಂದಲ)

** Expunged as ordeted by the Chair.

ಅಧ್ಯಕ್ಷರು.—ಲಕ್ಕಪ್ಪನವರೇ, ಇದು ಸರಿಯಲ್ಲ. ನೀವೂ ಒಂದು ಮಾತನಾಡುತ್ತೀರಿ, ಅವರೂ ಒಂದು ಮಾತನಾಡುತ್ತಾರೆ ಮಾತಿಗೆ ಮಾತು ಹೋಗಬೇಡಿ.....

ಶ್ರೀ ಕೆ. ಲಕ್ಕಪ್ಪ.—**ಎನ್ನುವ ಪದ ಸರಿಯಿಲ್ಲ,ಅದನ್ನು ಉಪಯೋಗಿಸಬಾರದು ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. **ಎನ್ನುವುದು ಫೇತ್‌ಫುಲ್ ಅನಿಮಲ್ ಆ ಕೀರ್ತಿ ನಮಗೆ ಬೇಕಾಗಿಲ್ಲ, ಅವರಿಗೇ ಕೊಡಿ, ಅವರೇ ಇಟ್ಟುಕೊಳ್ಳಲಿ.....

ಶ್ರೀ ಎಸ್. ಜಿ. ಸಂಜಯ್ಯ ಮಾಳ್.—ಒಂದು ಲಕ್ಷ ಜನತೆ ನಮ್ಮನ್ನಿಲ್ಲಿಗೆ ಆರಿಸಿ ಕಳಿಸಿದ್ದಾರೆ...

(ಗೊಂದಲ)

ಶ್ರೀ ಎಸ್. ಜಿ. ಸಂಜಯ್ಯ ಮಾಳ್.—ಒಂದು ಲಕ್ಷ ಜನ ನಮ್ಮನ್ನು ಆರಿಸಿ ಕಳಿಸಿದ್ದಾರೆ. ಆದ್ದರಿಂದ ನಡತೆ ಮೇಲೆ ಹಿಡಿತ ಇಟ್ಟುಕೊಂಡು ಮಾತನಾಡಬೇಕು. ಅವರು ಹೊರಗಡೆ ಪ್ರಚಾರ ಮಾಡುವಂತೆ ಇಲ್ಲಿ ಮಾತನಾಡುತ್ತಿದ್ದಾರೆ. ಒಂದು ಲಕ್ಷ ಜನರ ನಡತೆ, ಗೌರವ, ಸಂಸ್ಕೃತಿ ಬಗ್ಗೆ ನಮಗೆ ಅಭಿಮಾನ ಇರಬೇಕು ನಾವು ಇಲ್ಲಿ ಮಾತನಾಡುವಾಗ ಈ ಸದನದ ಗೌರವವನ್ನು ಮೀರದಂತೆ ನಾಲಿಗೆ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬೇಕು.

ಶ್ರೀ ಬಸವರಾಜ ರಾಯ ರೆಡ್ಡಿ.—**ಎಂದರೆ ಅದು ಅನ್‌ಪಾರ್ಲಿಮೆಂಟರಿ ವರ್ಡ್ ಅಲ್ಲ. ಅದು ಫೇತ್‌ಫುಲ್ ಅನಿಮಲ್.....

ಶ್ರೀ ವಿಜಯಕುಮಾರ್ ಸೊರಕೆ.—**ಎಂದರೆ ಚಪ್ಪಲಿ ಕಚ್ಚಿಕೊಂಡು ಬೀಳುವುದು.....

(ಗೊಂದಲ)

ಶ್ರೀ ಎಂ. ರಘುಪತಿ.— ನಾವು **ಎಂದರೆ ಬೇರೆಯವರು ಯಾಕೆ ತಮ್ಮನ್ನು ಅದಕ್ಕೆ ಕಂಪೇರ್ ಮಾಡಿಕೊಳ್ಳಬೇಕು.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡಿ.....

ಶ್ರೀ ಆರ್. ಎನ್. ನಾಯಕ್.—**ವಾಪಸ್ **ಸಿಗುತ್ತದೆ.

(ಗೊಂದಲ)

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—**ಅದಕ್ಕೆ ಅಪಮಾನ ಮಾಡಬೇಡಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ರಿಪೋರ್ಟ್‌ನಲ್ಲಿ ಬಂದಿರತಕ್ಕ ಆಪಾದನೆಗಳು ಪ್ರೀಮಾ ಫೇಸಿಯಿಂದ ಕೂಡಿವೆ ಆ ಬಗ್ಗೆ ವಿಚಾರಣೆ ಆಗಲಿ. ಮೊದಲು ಕಾನೂನಿನ ಪ್ರಕಾರ ವಿಚಾರಣೆ ಆಗಲಿ. Within two weeks reply ಕೊಡಿ ಎಂದು ಹೇಳಿದ್ದೇವೆ. After we receive the reply. ಅದು ಆದಮೇಲೆ ಇದರಲ್ಲಿ ಯಾವ ಯಾವ ತಪ್ಪುಗಳಿವೆ ಎಂಬುದನ್ನು ನೋಡಿ ಆ ಬಗ್ಗೆ ಏನೇನು ಕ್ರಮಗಳನ್ನು ಕೋ ಆಪರೇಟಿವ್ ಆಕ್ಟ್ ಪ್ರಕಾರ ತೆಗೆದುಕೊಳ್ಳುತ್ತೇವೆ. ಅಗತ್ಯ ಬಿದ್ದರೆ ಕ್ರಿಮಿನಲ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುವುದಕ್ಕೂ ನಾವು ಹಿಂದು ಮುಂದು ನೋಡುವುದಿಲ್ಲ. After receiving the reply Government will not hesitate to take action against anybody who is found guilty under law. We will never hesitate. I do not want to hide it.

ಶ್ರೀ ಎಂ. ವೀರಪ್ಪ ಮೊಯಿಲಿ.—ಓಳರಲ್ಲಿ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಓಳರಲ್ಲಿ ಆಲ್ಲ ಓಳ ಕೆಳಗೋ ಅಥವಾ ಖಂರ ಕೆಳಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡಬೇಕಾಗುತ್ತದೆ. But, I said after the reply ಒಂದು ಸಲ ನೋಟೀಸ್ ಕೊಟ್ಟ ಮೇಲೆ ಫ್ರಾಡ್, ಚೀಟಿಂಗ್ ಎಲ್ಲಾ ಆದರೆ we will prosecute them. There is no other way of charge-sheeting and e ding them to jail. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಛಾರ್ಜ್ ಹಾಕಬೇಕಾಗುತ್ತದೆ

* Expunged as order by the Chair

ಇವೊತ್ತು ನಾನು ಏನು ಹೇಳುತ್ತಿದ್ದೆ ಅಂದರೆ, ಈ ಸರ್ಕಾರ ಬಂದಮೇಲೆ ಸಹಕಾರಿ ಗೃಹ ನಿರ್ಮಾಣ ಸಂಘಗಳ ಬಗ್ಗೆ ಇಟ್ಟ ಹೆಜ್ಜೆಯ ಬಗ್ಗೆ ಒಂದೊಂದಾಗಿ ಸ್ಪಷ್ಟವಾಗಿ ಹೇಳಿದ್ದೇನೆ.

ಇಷ್ಟು ಹಂತಗಳಲ್ಲಿ ಈ ಮೋಸ ಏನು ನಡೆದಿದೆ ಅದು ಆಗಕೂಡದು, ಈ ಒಂದು ಬೋಗಸ್ ಮೆಂಬರ್‌ಷಿಪ್ ಆಗಕೂಡದು ಎಂದು ಸರ್ಕಾರ ಎಲ್ಲ ಪ್ರಯತ್ನ ಮಾಡಿದೆ. It has taken all the steps. Still, I tell some people have got ingenuity of committing it. Yes. After the reply we will take action under the co-operative act and against people found guilty under any section of the IPC or any other law, we will not hesitate to prosecute them and see that they are punished in the court of law. ಅದು ಯಾರೇ ಇರಲಿ, ಸಿ.ಬಿ.ಐ. ಬಗ್ಗೆ ಇನ್ನೊಂದು ವಿಚಾರ ಹೇಳುತ್ತೇನೆ. When we have got officers like Rao, Vatsala Narhona, we should be proud of them. They are all honest officers who have courage to enquire into such things.

SRI B. BASAVALINGAPPA.—Ex-Chief Minister has not co-operated.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಸಿ. ಬಿ. ಐ. ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸಿ.ಬಿ.ಐ. ಎಂದು ಒಂದು ಸಂಸ್ಥೆ ಇದೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಸಿ.ಬಿ.ಐ.ದು ಎಲ್ಲ ಸರಿ ಎಂದು ಹೇಳುವುದಿಲ್ಲ, ನಮ್ಮದು ಎಲ್ಲ ಸರಿ ಎಂದೂ ಸಹ ಹೇಳುವುದಿಲ್ಲ. ಇವತ್ತು ಒಳ್ಳೆಯ ಆಫೀಸರ್ಸ್ ಆಲ್ಲೂ ಇದ್ದಾರೆ, ಇಲ್ಲೂ ಇದ್ದಾರೆ. ತಪ್ಪು ಮಾಡತಕ್ಕವರು.....

SRI B. BASAVALINGAPPA.—Previous Chief Minister is there. We are demanding enquiry against him. Therefore it is not possible.

SRI S. R. BOMMAI.—No, no *Prima facie* CBI cannot enquire against the Chief Minister. Yes, Under the Commission of Enquiry Act you will have to hold it against a political person I have been maintaining that CBI is not competent where political people are there. Commission of Enquiry ಕಾನೂನು ಇದೆ, ಆ ಕಾನೂನು ಪ್ರಕಾರ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕಾಗುತ್ತದೆ. ಈಗ ನನ್ನ ಮೇಲೆ ಇರಬಹುದು, ನಾಳೆ ನಿಮ್ಮ ಮೇಲೆ ಇರಬಹುದು. ಆ ಬಗ್ಗೆ ಇವತ್ತು ನನ್ನ ಸ್ಪಷ್ಟ ಅಭಿಪ್ರಾಯ ಇದೆ, ಸಿ. ಬಿ. ಐ.ಗೆ ಕೊಡತಕ್ಕ ಪ್ರಶ್ನೆ ಇದಲ್ಲ. State Government has got honest officers who have got moral courage to tell to the government that these are the guilty. We will entrust it. Let us see. When it comes, I will not hesitate. Government will not hesitate to take action against them. Follow-up of the enquiry is after we receive the reply. Government has made its position clear. I must congratulate my friends. Most of them who spoke did not make any such allegations also and they were very fair. Ultimately, this is a human problem of ansite. ಸರ್ಕಾರದ ಪ್ರಯತ್ನ ಎಲ್ಲಿದೆ ಯೆಂದರೆ ಯಾರು ಹಣ ಕೊಟ್ಟಿದ್ದಾರೆ, ಯಾರು ಎಲಿಜಿಬಲ್ ಇದ್ದಾರೆ ಅವರಿಗೆ ಯೋಗ್ಯ ಬೆಲೆಯಲ್ಲಿ ಒಂದು ಒಳ್ಳೆಯ ಸೈಟ್ ಕೊಟ್ಟು ಅಲ್ಲಿ ಮನೆ ಕಟ್ಟಿಕೊಳ್ಳತಕ್ಕಂಥ ವ್ಯವಸ್ಥೆ ಮಾಡತಕ್ಕಂಥಾದ್ದು ಸರ್ಕಾರದ ಇಚ್ಛೆ ಆಗಿದೆ. ಇದಕ್ಕೆ ಅಡ್ಡ ಬಂದಂಥ ಯಾವನೇ ಏಜೆಂಟ್ ಇರಲಿ, ಬೇರೆ ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ತಡೆಯಿರಿ.

(ಗೊಂದಲ)

ಶ್ರೀ ವಂಲ್ಲಿಕಾರ್ಜುನ ಎಂ. ಖರ್ಗೆ,—ಸಿ.ಬಿ.ಐ. ಮೂಲಕ ಎನ್‌ಕ್ವೈರಿ ಮಾಡಿಸಿ.

ಅಧ್ಯಕ್ಷರು.—ಅವರು ಆಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ.

ಶ್ರೀ ವಂಲ್ಲಿಕಾರ್ಜುನ ಎಂ. ಖರ್ಗೆ.—ಏಕೆ ಆಗುವುದಿಲ್ಲ ? In what way CBI is not competent ಎಂದು ನಾವು ಹೇಳುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾಧ್ಯಕ್ಷರ ಪೀಠದ ಬಳಿ ಬಂದು ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು.—ನೀವುಗಳು ಈ ರೀತಿ ಮಾಡುವುದು ಸರಿಯಲ್ಲ, ಈಗ ಚರ್ಚೆ ಮುಗಿಯಿತು. ಸಭೆ ನಡೆಸುವುದಕ್ಕೆ ಅವಕಾಶ ಕೊಡಿ, ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ. ವಿವಿಧ ಸಮಿತಿ ಸಭೆಗಳ ಸದಸ್ಯರ ಪಟ್ಟಿಯನ್ನು ನಾನು ಅನೌನ್ಸ್ ಮಾಡಬೇಕು. ಕಮಿಟಿಗಳು ತೆಲಸ ಮಾಡಬೇಕಾಗುತ್ತದೆ.

(ಎರಡೂ ಕಡೆಯ ಸದಸ್ಯರು ಎದ್ದು ನಿಂತು ಒಮ್ಮೆಲೆ ಮಾತನಾಡತೊಡಗಿದರು)

ಶ್ರೀ ಪಿ. ಜಿ. ಆರ್. ಸಿಂಧ್ಯ —ಜೀವರಾಜ್ ಆಳ್ವ ಅವರ ಪ್ರಿವಿಲೇಜ್ ಮೋಷನ್ ಅನ್ನು ಸಂಪೋ ಮೋಟೊ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ...

(ಗೊಂದಲ)

(ಎರಡೂ ಕಡೆಯ ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು)

(ಗೊಂದಲ)

ANNOUNCEMENT

ಅಧ್ಯಕ್ಷರು.—ಡಾ. ಜೀವರಾಜ್ ಆಳ್ವ ಅವರ ಪ್ರಿವಿಲೇಜ್ ಮೋಷನ್ ಅನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದೇನೆ. ಅದೇ ರೀತಿ ವಿವಿಧ ಸಮಿತಿಯ ಸಭೆಗಳಿಗೆ ಸದಸ್ಯರ ನೇಮಕಾತಿ ಲಿಸ್ಟ್ ಅನ್ನು ಅನೌನ್ಸ್ ಮಾಡಿದ್ದೇನೆ.

ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಸೇರಿ ಒಂದು ಒಮ್ಮತದ ಸದಸ್ಯರುಗಳ ಪಟ್ಟಿಯನ್ನು ಕೊಟ್ಟಿರುವುದರಿಂದ ವಿಧಾನ ಮಂಡಲದ ಸಮಿತಿಗಳ ಚುನಾವಣೆಯು ಇರುವುದಿಲ್ಲ ಮತ್ತು ಈ ಕೆಳಕಂಡವರು ದಿನಾಂಕ ೧೮ನೇ ಏಪ್ರಿಲ್, ೧೯೮೯ರಿಂದ ಜಾರಿಗೆ ಬರುವ ವಿವಿಧ ಸಮಿತಿಗಳ ಸದಸ್ಯರಾಗಿರುತ್ತಾರೆ.

೧. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

ಶ್ರೀಯುತರುಗಳಾದ

೧ ಭೀಮನೇನಿ ಕೊಂಡಯ್ಯ	೭ ಬಿ. ಎಸ್. ಯಡಿಯೂರಪ್ಪ
೨ ಗಂಗಣ್ಣ	೮ ಕೆ. ಹೆಚ್. ಪಾಟೀಲ್
೩ ಎಂ. ಎಸ್. ಕೃಷ್ಣನ್	೯ ಬ್ಲೇಸಿಯಸ್ ಎಂ. ಡಿಸೋಜ
೪ ಜಿ. ವಿ. ಮಂಟೂರ್	೧೦ ಬಸವರಾಜ್ ಹವಗಪ್ಪ ಪಾಟೀಲ್
೫ ಕೆ. ಪಿ. ವಂಗಣ್ಣನವರ್	೧೧ ಜಿ. ರಾಮಕೃಷ್ಣ
೬ ಬಿ. ಸೋಮಶೇಖರ್	೧೨ ಸಿ. ಬೈರೇಗೌಡ

೨. ಅಂದಾಜುಗಳ ಸಮಿತಿ

ಶ್ರೀಯುತರುಗಳಾದ

೧ ಐ. ಬಿ. ಶಂಕರ್
೨ ಬಸವರಾಜ ರಾಯರೆಡ್ಡಿ
೩ ಎಂ ಎಸ್. ಪಾಟೀಲ್
೪ ರಮೇಶ್ ಕುಮಾರ್
೫ ಎಂ. ಡಿ. ಬಿರಾದರ್
೬ ಚಂದ್ರಶೇಖರ್
೭ ಪಿ. ಸಿ. ಸಿದ್ದನಗೌಡರ್
೮ ಶ್ರೀಮತಿ ಶಿವಕಾಂತ ಚತುರಿ
೯ ಪಂಪಾಪತಿ
೧೦ ವಸಂತ ವಿ. ಸಾಲಿಯಾನ
೧೧ ಡಿ. ಎ. ಚಿನ್ನಪ್ಪ
೧೨ ಮಲ್ಲಾರಗೌಡ ಎಸ್. ಪಾಟೀಲ್
೧೩ ಶ್ರೀಮತಿ ಮುಕ್ತಾರ್ ಉನ್ನೀಸಾ
೧೪ ಹೆಚ್. ಕೆ. ಕುಮಾರಸ್ವಾಮಿ
೧೫ ವಿಶ್ವನಾಥ ಪಾಟೀಲ್ ಹೆಬ್ಬಾಳ

೩. ಸಾರ್ವಜನಿಕ ಉದ್ಯಮಗಳ ಸಮಿತಿ

೧ ಬಿ. ಜಿ. ಕೊಟ್ರಪ್ಪ
೨ ಡಿ. ಬಿ. ಗಂಗಾಧರಪ್ಪ
೩ ಕೆ. ಎಸ್. ಬೀಳಗಿ
೪ ಆರ್. ವೆಂಕಟರಾವಯ್ಯ
೫ ಸಿ. ಪಿ. ಮಾಡಲಗಿರಿಯಪ್ಪ
೬ ಎಸ್. ಜಿ. ನಂಜಯ್ಯನಮಠ್
೭ ಬಿ. ಎ. ಉಮರಬ್ಬ
೮ ಡಾ. ಎಸ್. ಎಸ್. ಹುಂಬರವಾಡಿ
೯ ಮುನಿಶ್ಯಾಮಪ್ಪ

೪. ಹಕ್ಕು ಭಾದ್ಯತೆಗಳ ಸಮಿತಿ

೧ ಜಿ. ಎಸ್. ಬಾಗಲಕೋಟ್
೨ ಸಾಲೇರ ಎಸ್. ಸಿದ್ದಪ್ಪ
೩ ಕೆ. ಹೆಚ್. ರಾಮಕೃಷ್ಣಯ್ಯ
೪ ಬಿ. ಬಸವಲಿಂಗಪ್ಪ
೫ ಕೆ. ಹೆಚ್. ಶ್ರೀನಿವಾಸ್
೬ ಪಟಮಕ್ಕಿ ರತ್ನಾಕರ್
೭ ಡಾ. ಬಿ. ಎಂ. ತಿಪ್ಪೇಸ್ವಾಮಿ

೫ ಅಧೀನ ಶಾಸನ ರಚನಾ ಸಮಿತಿ

ಶ್ರೀಯುತರುಗಳಾದ

೧ ಕೆ. ಎಲ್. ಶಿವಲಿಂಗೇಗೌಡ
೨ ಬಾಬುರೆಡ್ಡಿ ವಿ. ತುಂಗಳ್
೩ ಕೆ. ಎ. ಪಾಟೀಲ್
೪ ಬಿ. ಎ. ಉಪ್ಪಿನ್
೫ ಬಸವರಾಜ್
೬ ಜಿ. ರಾಜೂಗೌಡ
೭ ಎ. ಕೃಷ್ಣಪ್ಪ
೮ ಎನ್. ಹೆಚ್. ಗೌಡ

೬ ಸರ್ಕಾರದ ಭರವಸೆಗಳ ಸಮಿತಿ

೧ ಬಿ. ಧರ್ಮಪ್ಪ
೨ ರಾಜಾ ಅಮರಪ್ಪ ನಾಯಕ್
೩ ಬಿ. ಅಪ್ಪಾಜಿಗೌಡ
೪ ಪಿ. ಬಿ. ಓಂಕಾರಮೂರ್ತಿ
೫ ಕೆ. ಜೆ. ಜಾರ್ಜ್
೬ ಗೋಪಾಲ ಮುಕುಂದ ಕಾನಡೆ
೭ ಮಹಮದ್ ಉಮರ್
೮ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ

೭ ಖಾಸಗಿ ಸದಸ್ಯರ ವಿಧೇಯಂಕಗಳ ಹಾಗೂ ನಿರ್ಣಯಗಳ ಸಮಿತಿ

೧ ಡಿ. ಎಸ್. ಚಂದ್ರಶೇಖರಯ್ಯ
೨ ಪೂರ್ಣಮುತ್ತಪ್ಪ
೩ ಬಿ. ಡಿ. ಬಸವರಾಜು
೪ ಟಿ. ಬಿ. ಜಾಳಿಕಾಯಿ
೫ ಜಿ. ನಾರಾಯಣ ಕುಮಾರ್
೬ ಎಸ್. ಎಸ್. ಕಡಪಟ್ಟಿ
೭ ಸಿ. ಕಣ್ಣನ್
೮ ಜಿ. ಎಸ್. ಆಚಾರ್
೯ ಶಿವಶೇಖರಗೌಡ ಪಾಟೀಲ್
೧೦ ಬಿ. ವಿ. ಕರೀಗೌಡ

೮ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ

೧ ಬಿ. ಜಿ. ಜವಳಿಂಡಿ
೨ ಎ. ಬಿ. ದೇಸಾಯಿ
೩ ಜೆ. ಎಸ್. ದೊಡ್ಡಮೇಟಿ
೪ ಶ್ರೀಮತಿ ಶಕುಂತಲೆ ಚೌಗಂಲೆ
೫ ಪಿ. ಸಿ. ಮುನಿಸ್ವಾಮಯ್ಯ
೬ ಕೆ. ಕುಶಾಲ
೭ ಎಂ. ರಾಮಪ್ಪ
೮ ಎಂ. ಎಲ್. ಉಸ್ತಾದ್
೯ ಕೆ.ಎಂ. ಮುನಿಯಪ್ಪ

೯ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ

೧ ಎಂ.ಎಲ್. ಮುತ್ತಣ್ಣನವರ್
೨ ವಸಂತ ಬಂಗೇರ
೩ ಬಿ. ಬಸವಯ್ಯ
೪ ನೀಲಕಂಠಗೌಡ
೫ ಚಂದ್ರಕಾಂತ ಬೆಲ್ಲದ್
೬ ಎಂ. ಪಿ. ಕೇಶವವರ್ಮಿ
೭ ಶರಣಬಸಪ್ಪ ಮಾಲಿ ಪಾಟೀಲ್
೮ ವಿನಯಕುಮಾರ್ ಸೊರಕೆ
೯ ಬಿ. ಗುರುಪ್ರಸಾದ್

೧೦ ಸೌಕರ್ಯ ಸಮಿತಿ

೧ ಉಮೇಶ್ ವಿ. ಕಟ್ಟಿ
೨ ಎಸ್. ಸಿ. ಮಾಳಗಿ
೩ ಎಂ.ಜಿ.ಥವೇರಿ
೪ ಹೆಚ್. ಕೆಂಪೇಗೌಡ
೫ ಶ್ರೀಮತಿ ಮನೋರಮ ಮಧ್ವರಾಜ್
೬ ಎಂ. ಕೆ. ಕುಲಕರ್ಣಿ
೭ ಜಿ. ರಾಮದಾಸ್
೮ ಎಸ್.ಆರ್.ಲಕ್ಷ್ಮಯ್ಯ

೧೧ ಮಂಗಳೂರಂ ವಿಶ್ವವಿದ್ಯಾನಿಲಯಂದ ಸೆನೆಟ್

೧ ಮೊಹಪಂದ್ ಮೊಯಿನುದ್ದೀನ್
೨ ಬಿ.ಆರ್. ನೀಲಕಂಠಪ್ಪ
೩ ಕೆ.ಪ್ರತಾಪಚಂದ್ರ ಶೆಟ್ಟಿ
೪ ಎನ್.ಎಂ. ಆಡ್ಯಂತಾಯ
೫ ತಿಪ್ಪೇಸ್ವಾಮಿ

ಅಧ್ಯಕ್ಷರು.—ಈಗ ಈ ಸಭೆಯನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಲಾಗಿದೆ.

ಸದನವು ಸಾಯಂಕಾಲ ೬–೫೨ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.